₹ 5/-

# ನೇಸರು
## ತಿಂಗಳೋಲೆ

PAGES 20

MARCH 2026 | Nesaru Tingalole | Vol. XLIV - 03




ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಮೈಸೂರು ಅಸೋಸಿಯೇಷನ್ನಿನಲ್ಲಿ ಶಿವರಾತ್ರ್ಯೋತ್ಸವ





ಓಂ ನಮಃ ಶಿವಾಯ

ಇದೇ ಫೆಬ್ರುವರಿ 15ರಂದು ಮಹಾಶಿವರಾತ್ರಿಯ ಪ್ರಯುಕ್ತ ಮೈಸೂರು ಅಸೋಸಿಯೇಷನ್ನಿನಲ್ಲಿ ಶಿವರಾತ್ರ್ಯೋತ್ಸವವನ್ನು ಬಹಳ ವಿಶೇಷವಾಗಿ ಆಚರಿಸಲಾಯ್ತು. ಮಹಾದೇವ ಶಿವ ಎಲ್ಲರ ಕಷ್ಟ ಕಳೆದು ಎಲ್ಲರಿಗೂ ಮಂಗಳವನ್ನುಂಟು ಮಾಡಲಿ ಎಂದು ಸಂಕಲ್ಪಿಸಿ ಅರ್ಚಕ ಅನಂತ ಜೋಶಿಯವರು ಪೂಜೆಯನ್ನು ಸಾಂಗವಾಗಿ ನೆರವೇರಿಸಿದರು. ರುದ್ರಾಭಿಷೇಕ, ಶಿವ ಸಹಸ್ರನಾಮಾರ್ಚನೆ, ಗಣೇಶ ಸಹಸ್ರ ನಾಮಾರ್ಚನೆ, ಗೌರಿ ಶತನಾಮಾರ್ಚನೆ ಮುಂತಾದ ಪೂಜೆಗಳನ್ನು ಸಲ್ಲಿಸಿ ನೈವೇದ್ಯ ನೀಡಿ ಮಂಗಳಾರತಿ ಮಾಡಿದರು. ದೇವರ ಆರತಿಯಲ್ಲಿ ನೆರೆದ ಭಕ್ತಾದಿಗಳೆಲ್ಲ ಭಾಗವಹಿಸಿದ್ದರು. ಶಿವನಾಮ ಭಜನೆ ಮಾಡಿ ಧನ್ಯರಾದರು. ಎಲ್ಲರಿಗೂ ತೀರ್ಥ, ನೈವೇದ್ಯ ನೀಡಲಾಯಿತು

# ಕಾಮನ ಹಬ್ಬ : ಬಣ್ಣಗಳ ಸಮ್ಮಿಲನ ಮತ್ತು ಬಾಂಧವ್ಯದ ಸಂಭ್ರಮ

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬಗಳಿಗೆ ವಿಶೇಷ ಸ್ಥಾನವಿದೆ. ಅವುಗಳಲ್ಲಿ ಅತ್ಯಂತ ವರ್ಣರಂಜಿತ ಹಾಗೂ ಉತ್ಸಾಹಭರಿತ ಹಬ್ಬವೆಂದರೆ ಅದು 'ಹೋಳಿ'. ಇದನ್ನು ಬಣ್ಣಗಳ ಹಬ್ಬ, ವಸಂತೋತ್ಸವ ಅಥವಾ ಕಾಮನ ಹಬ್ಬ ಎಂದೂ ಕರೆಯಲಾಗುತ್ತದೆ. ಚಳಿಗಾಲದ ಮಂದಗತಿಯ ಜೀವನಕ್ಕೆ ವಿದಾಯ ಹೇಳಿ, ಪ್ರಕೃತಿಯು ಹೊಸ ಹಸಿರು ಹಾಗೂ ಬಣ್ಣ ಬಣ್ಣದ ಹೂವುಗಳಿಂದ ಕಂಗೊಳಿಸುವ ವಸಂತ ಕಾಲದ ಆರಂಭದಲ್ಲಿ ಈ ಹಬ್ಬ ಬರುತ್ತದೆ. ಮನುಷ್ಯನ ಮನಸ್ಸಿನ ಮೌಢ್ಯ, ದ್ವೇಷ ಮತ್ತು ಅಸೂಯೆಗಳನ್ನು ಸುಟ್ಟುಹಾಕಿ, ಪ್ರೀತಿ ಮತ್ತು ಸೌಹಾರ್ದತೆಯ ಬಣ್ಣಗಳನ್ನು ತುಂಬಿಕೊಳ್ಳುವುದೇ ಈ ಹಬ್ಬದ ಆಶಯವಾಗಿದೆ.



ಹೋಳಿ ಹಬ್ಬದ ಹಿನ್ನೆಲೆಯಲ್ಲಿ ಹಲವಾರು ಪುರಾಣ ಕಥೆಗಳು ಹಾಸುಹೊಕ್ಕಾಗಿವೆ. ಅದರಲ್ಲಿ ಮುಖ್ಯವಾದುದು ಭಕ್ತ ಪ್ರಹ್ಲಾದನ ಕಥೆ. ಅಹಂಕಾರಿ ರಾಕ್ಷಸ ರಾಜ ಹಿರಣ್ಯಕಶಿಪು ತಾನೇ ದೇವರು ಎಂದು ನಂಬಿದ್ದರೂ, ಅವನ ಮಗ ಪ್ರಹ್ಲಾದ ಮಾತ್ರ ವಿಷ್ಣುವಿನ ಪರಮ ಭಕ್ತನಾಗಿದ್ದನು. ಮಗನ ಭಕ್ತಿಯನ್ನು ಸಹಿಸದ ರಾಜನು, ಅವನನ್ನು ಕೊಲ್ಲಲು ತನ್ನ ತಂಗಿ 'ಹೋಲಿಕೆ'ಯ ಸಹಾಯ ಪಡೆಯುತ್ತಾನೆ. ಬೆಂಕಿಯಿಂದ ಸುಡದ ವರವನ್ನು ಪಡೆದಿದ್ದ ಹೋಲಿಕೆಯು ಪ್ರಹ್ಲಾದನನ್ನು ಎತ್ತಿಕೊಂಡು ಬೆಂಕಿಯಲ್ಲಿ ಕುಳಿತುಕೊಳ್ಳುತ್ತಾಳೆ. ಆದರೆ ಅಚ್ಚರಿಯೆಂಬಂತೆ, ಭಕ್ತಿಯ ಬಲದಿಂದ ಪ್ರಹ್ಲಾದನು ಸುರಕ್ಷಿತವಾಗಿ ಉಳಿಯುತ್ತಾನೆ ಮತ್ತು ಅಧರ್ಮದ ಹಾದಿಯಲ್ಲಿದ್ದ ಹೋಲಿಕೆ ಬೆಂಕಿಯಲ್ಲಿ ಸುಟ್ಟು ಬೂದಿಯಾಗುತ್ತಾಳೆ. ಇದರ ನೆನಪಿಗಾಗಿ ಹಬ್ಬದ ಮೊದಲ ದಿನದಂದು ದೊಡ್ಡದಾಗಿ ಕಟ್ಟಿಗೆಗಳನ್ನು ಜೋಡಿಸಿ ಬೆಂಕಿ ಹಚ್ಚುವ ಮೂಲಕ 'ಹೋಲಿಕಾ ದಹನ'ವನ್ನು ಆಚರಿಸಲಾಗುತ್ತದೆ. ಇದು ಲೋಕಕ್ಕೆ 'ಕೆಟ್ಟದ್ದರ ಮೇಲೆ ಒಳ್ಳೆಯದಕ್ಕೆ ಜಯ ನಿಶ್ಚಿತ' ಎಂಬ ಸಂದೇಶವನ್ನು ನೀಡುತ್ತದೆ.

ಮತ್ತೊಂದು ಕಡೆ, ಈ ಹಬ್ಬವು ಶ್ರೀಕೃಷ್ಣ ಮತ್ತು ರಾಧೆಯ ದಿವ್ಯ ಪ್ರೇಮದ ಸಂಕೇತವೂ ಹೌದು. ಕೃಷ್ಣನು ತನ್ನ ಬಾಲ್ಯದಲ್ಲಿ ಗೋಪಿಕೆಯರೊಂದಿಗೆ ಬಣ್ಣಗಳ ಆಟವಾಡುತ್ತಿದ್ದನೆಂಬ ಕಥೆಯಿದೆ. ಇದರಿಂದಾಗಿ ಉತ್ತರ ಭಾರತದ ಬೃಂದಾವನ ಮತ್ತು ಮಥುರಾಗಳಲ್ಲಿ ಹೋಳಿ ಹಬ್ಬವನ್ನು ಅತ್ಯಂತ ಸಡಗರದಿಂದ ಆಚರಿಸಲಾಗುತ್ತದೆ. ದಕ್ಷಿಣ ಭಾರತದ ಕೆಲವು ಕಡೆಗಳಲ್ಲಿ ಇದನ್ನು 'ಕಾಮನ ಹಬ್ಬ' ಎಂದು ಕರೆಯುತ್ತಾರೆ. ಶಿವನು ತನ್ನ ಮೂರನೇ ಕಣ್ಣನ್ನು ಬಿಟ್ಟು ಮನ್ಮಥನನ್ನು (ಕಾಮದೇವ) ಭಸ್ಮ ಮಾಡಿದ ದಿನದ ಸಂಕೇತವಾಗಿಯೂ ಇದನ್ನು ಭಾವಿಸಲಾಗುತ್ತದೆ.

ಹಬ್ಬದ ದಿನದಂದು ಬೆಳಿಗ್ಗೆಯಿಂದಲೇ ಸಂಭ್ರಮ ಮನೆ ಮಾಡಿರುತ್ತದೆ. ಬೀದಿ–ಬೀದಿಗಳಲ್ಲಿ ತಮಟೆ, ಢೋಲಕ್‌ಗಳ ಸದ್ದಿನ ನಡುವೆ ಯುವಕ–ಯುವತಿಯರು, ಮಕ್ಕಳು ಮತ್ತು ವೃದ್ಧರು ಪರಸ್ಪರ 'ಗುಲಾಲ್' ಎಂಬ ಬಣ್ಣವನ್ನು ಹಚ್ಚುತ್ತಾ ಸಂತೋಷ ಹಂಚಿಕೊಳ್ಳುತ್ತಾರೆ. 'ಬುರಾ ನ ಮಾನೋ ಹೋಲಿ ಹೈ' (ಬೇಸರ ಮಾಡಿಕೊಳ್ಳಬೇಡಿ, ಇದು ಹೋಳಿ ಹಬ್ಬ) ಎನ್ನುವ ಮಾತು ಎಲ್ಲೆಡೆ ಕೇಳಿಬರುತ್ತದೆ. ಈ ದಿನ ಜನರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು, ದ್ವೇಷಗಳನ್ನು ಮರೆತು ಅಪ್ಪಿಕೊಳ್ಳುತ್ತಾರೆ. ಶ್ರೀಮಂತ–ಬಡವ ಎಂಬ ಭೇದವಿಲ್ಲದೆ ಎಲ್ಲರೂ ಬಣ್ಣದಲ್ಲಿ ಮಿಂದೆದ್ದು *(ಪುಟ 8ಕ್ಕೆ)*

ನೇಸರು ತಿಂಗಳೋಲೆ

ಸಂಪುಟ 44 | ಮಾರ್ಚ್ 2026 | ಸಂಚಿಕೆ 03

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in



**ಡಾ. ಜ್ಯೋತಿ ಸತೀಶ್**

ನಮ್ಮ ಬದುಕು "ಕೊಡುವುದು ಮತ್ತು ತೆಗೆದುಕೊಳ್ಳುವ ಪ್ರಕ್ರಿಯೆ" ಸುತ್ತನೇ ಸುತ್ತುತ್ತಾ ಇರುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲೂ ಒಂದಲ್ಲ ಒಂದು ಕಾರಣದಿಂದ ನಾವೆಲ್ಲರೂ ಈ ಪ್ರಕ್ರಿಯೆಯಲ್ಲಿ ಭಾಗಿಗಳಾಗಿರುತ್ತೇವೆ. ನಮ್ಮ ಹಿರಿಯರು "ಗೌರವ ಕೊಟ್ಟು ಗೌರವ ತೆಗೆದುಕೊಳ್ಳಬೇಕು" ಎಂದಿದ್ದಾರೆ. ನಾವು ಯಾವ ರೀತಿಯ ಬೀಜವನ್ನು ಬಿತ್ತಿರುತ್ತೇವೋ ಅದೇ ರೀತಿಯ ಬೆಳೆಯನ್ನು ಬೆಳೆಯುತ್ತೇವೆ. ಹಾಗೆ ನಮ್ಮ ನಡುವೆ ಇರುವ ಸಂಬಂಧಗಳೂ ಕೂಡ. ಎಲ್ಲವೂ ನಮ್ಮ ಕೈಯಲ್ಲಿದೆ. ಒಮ್ಮೊಮ್ಮೆ ಕೆಲವು ಸಂಬಂಧಗಳನ್ನು ಉಳಿಸಿ ಕೊಳ್ಳಬೇಕಾದರೆ, ನಾವು ಮೌನಕ್ಕೆ ಶರಣಾಗಬೇಕಾಗುತ್ತದೆ. ಅದು ನಮ್ಮ ಸೋಲಲ್ಲ. ಅದು ನಮ್ಮ ಜಾಣ್ಮೆಯಾಗಿರುತ್ತದೆ. ಎಲ್ಲದಕ್ಕೂ ಪ್ರತ್ಯುತ್ತರ ಕೊಡಲೇ ಬೇಕೆಂದಿಲ್ಲ. ಕೆಲವೊಮ್ಮೆ ನಮ್ಮ ಮೌನವೂ ಪ್ರಭಾವಶಾಲಿಯಾದ ಉತ್ತರವನ್ನು ನೀಡಬಲ್ಲದು. ತಂದೆ ತಾಯಿ ಮಕ್ಕಳೆದುರು ಜಗಳ ಮಾಡಬಾರದು ಎಂದು ಹಿರಿಯರು ಹೇಳುತ್ತಾರೆ. ಯಾಕೆ ಅದನ್ನು ಹೇಳಿದ್ದಾರೆ? ಎಂದು ನಾವು ಯೋಚಿಸುವುದಿಲ್ಲ. ಮುಂದೆ ಮಕ್ಕಳು ಕೂಡ ಅದನ್ನೇ ಕಲಿಯಬಾರದು. ಮಕ್ಕಳೆದುರು ಒಬ್ಬರಿಗೊಬ್ಬರು ಗೌರವಿಸಬೇಕು. ಈ ಬಾಂಧವ್ಯದ ಸುಂದರತೆಯನ್ನು ಮಕ್ಕಳು ಚಿಕ್ಕವರಿರುವಾಗಲೇ ಕಲಿಸಬೇಕಾಗುತ್ತದೆ. ಮನೆಯಲ್ಲಿರುವ ಅಕ್ಕ ತಂಗಿಯರನ್ನು ಪ್ರೀತಿಸಬೇಕು, ಗೌರವಿಸಬೇಕು ಹಾಗೆ ಅವರ ರಕ್ಷಣೆಯನ್ನು ಮಾಡಬೇಕೆಂದು ಮನೆಯ ಗಂಡು ಮಕ್ಕಳಿಗೆ ಚಿಕ್ಕವರಿರುವಾಗಲೇ ಕಲಿಸಬೇಕು. ಇಲ್ಲದಿದ್ದರೆ, ಬೇರೆಯವರ ಮನೆಯ ಹೆಣ್ಣುಮಕ್ಕಳನ್ನು ಹೇಗೆ ಗೌರವದಿಂದ ನೋಡಿಯಾರು? ಮನೆಯಲ್ಲಿ ನಾವು ಮಮತೆಯನ್ನು ಹಂಚಲು ಕಲಿಸಬೇಕು. ಒಬ್ಬರಿಗೊಬ್ಬರು ಅತೀ ಆತ್ಮೀಯತೆಯಿಂದ ಭರಿಸುವ ಸಹನೆಯನ್ನು ನಾವು ಮಕ್ಕಳಿಗೆ ಕಲಿಸಬೇಕಾಗುತ್ತದೆ. ಇಂದು ನಾವು ಬಿತ್ತಿದ ಬೀಜವೇ ನಾಳೆ ನಮ್ಮ ಮಕ್ಕಳು ಬಾಳುವ ಬದುಕಾಗುತ್ತೆ. ಅದಕ್ಕೆ ಹುಚ್ಚುತನ ಬಿಟ್ಟು ವಿವೇಕವನ್ನು ಬಿತ್ತೋಣ. ಪ್ರಾಕ್ಟಿಕಲ್ ಆಗಿ ಜೀವನಕ್ಕೆ ಯಾವುದು ಮುಖ್ಯ ಯಾವುದು ಅಮುಖ್ಯ ಎನ್ನುವುದರ ಕಡೆಗೆ ಆದ್ಯತೆಯನ್ನು ಕೊಡಬೇಕು.

ಒಂದು ಹೆಣ್ಣು ಮದುವೆಯಾಗಿ ಹೋದ ಮೇಲೆ, ಅತ್ತೆಯನ್ನು ಯಾವ ರೀತಿ ನಡೆಸಿಕೊಳ್ಳುತ್ತಾಳೋ, ಅತ್ತೆಯೂ ಅದೇ ರೀತಿಯ ಪ್ರತಿಕ್ರಿಯೆಯನ್ನು ನೀಡುತ್ತಾಳೆ. ಅತ್ತೆಗೆ ಮಗಳಾಗಬೇಕೋ, ಸೊಸೆಯಾಗಬೇಕೋ ಅನ್ನೋದು ಕೂಡ ನಮ್ಮ ಕೈಯಲ್ಲೆ ಇದೆ. ನಾವು ಅವರಿಗೆ ಗೌರವವನ್ನು ಕೊಟ್ಟರೆ, ಅವರಿಂದ ನಮಗೂ ಗೌರವ ಸಿಗುತ್ತದೆ. ಮಾನ, ಸಮ್ಮಾನಗಳನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಇವೆಲ್ಲವನ್ನು ಕಷ್ಟಪಟ್ಟು ಸಂಪಾದಿಸಬೇಕು. ಜೀವನ ಸಂಗಾತಿಯನ್ನು ಬದುಕಿನ ಯಾವುದೇ ತಿರುವಿನಲ್ಲೂ, ಎಂಥದ್ದೇ ಸಮಯದಲ್ಲೂ ಅಷ್ಟೇ ಪ್ರೀತಿ, ಗೌರವದಿಂದ ಅಲವತ್ತುಗೊಳ್ಳುವ ಭಾವ ನಮ್ಮಲ್ಲಿ ಸದಾ ಜಾಗೃತವಾಗಿರಬೇಕು. ಆಗ ಮಾತ್ರ ಆ ಸಂಬಂಧಕ್ಕೆ ಅರ್ಥವಿರುತ್ತದೆ.

ಹೊಸತರಲ್ಲಿ ಮದುವೆಯಾಗಿ ಬಂದ ಹೆಣ್ಣಿನಲ್ಲೂ ಹಾಗೂ ಹೊಸದಾಗಿ ಅತ್ತೆ ಎನಿಸಿಕೊಂಡವರಲ್ಲಿ ಮನದ ಮೂಲೆಯಲ್ಲಿ ಅವರವರ ಸ್ಥಾನದ ಬಗ್ಗೆ ಅಳುಕು, ಅಂಜಿಕೆ ಇರುತ್ತದೆ. ನನ್ನ ಮಗನನ್ನು ನನ್ನಿಂದ ದೂರಮಾಡುತ್ತಾಳೋ ಅಥವಾ ನನ್ನಿಂದ ನನ್ನ ಗಂಡನನ್ನು ದೂರವಿಡುತ್ತಾಳೋ ಎಂಬ ಸಣ್ಣ ಭಯ ಇಬ್ಬರ ಮನದಲ್ಲೂ ಹೊಯ್ದಾಡುತ್ತದೆ. ಇಬ್ಬರೂ ಅವರವರ ಸ್ಥಾನದ ಇತಿಮಿತಿಯನ್ನು ಅರಿತು, ಸೌಹಾರ್ದತೆಯುಳ್ಳ ಚೌಕಟ್ಟನ್ನು ನಿರ್ಮಿಸಿಕೊಂಡು, ಯಾರ ಮನಸ್ಸಿಗೂ ಧಕ್ಕೆಯಾಗದ ಹಾಗೆ ಬದುಕಿ ತೋರಿಸಬೇಕು.

ಆ ಮೂಲಕ ಒಬ್ಬರಿಗೊಬ್ಬರು ನಮ್ಮ ನಮ್ಮ ಜಾಗ ಸುರಕ್ಷಿತವಾಗಿದೆ ಎನ್ನುವ ಅಭಯವನ್ನು ನೀಡಬೇಕು. ಆಗ ಸಂಸಾರವೂ ಶಾಂತಿಯುತವಾಗಿ ನಡೆಯುತ್ತದೆ.

ನಾವು ಇನ್ನೊಬ್ಬರ ಮೇಲೆ ಅತಿಯಾದ ನಿರೀಕ್ಷೆಯನ್ನು ಇಟ್ಟುಕೊಳ್ಳಬಾರದು. ಎಲ್ಲಿ ಅತಿಯಾದ ನಿರೀಕ್ಷೆ ಇರುತ್ತದೋ ಅಲ್ಲಿ ಮನಸ್ಸಿಗೆ ನೋವುಂಟಾಗುವುದು ಸಹಜ. ಸಂಬಂಧಗಳಲ್ಲೂ ಅಷ್ಟೇ, ನಾವು ಅತಿಯಾಗಿ ಮೂಗು ತೂರಿಸಲು ಹೋಗಬಾರದು, ಅವರವರ ಸ್ವಾತಂತ್ರ್ಯಕ್ಕೆ ಬೆಲೆಯನ್ನು ನೀಡಿ, ದೂರವಿದ್ದೇ ಬೆಂಬಲವನ್ನು ಸೂಚಿಸಬೇಕು. ಆಗ ಸಂಬಂಧಗಳ ಮಧುರತೆಯನ್ನು ಕಾಯ್ದುಕೊಳ್ಳಬಹುದು.

ನಾವು ಚಿಕ್ಕವರಿರುವಾಗ, ನಮ್ಮ ತಂದೆ ತಾಯಂದಿರು ಗಂಡು ಮಕ್ಕಳಿಗೆ ಮೊದಲ ಪ್ರಾಶಸ್ತ್ಯವನ್ನು ನೀಡುತ್ತಿದ್ದರು. ಗಂಡು ಯಾವತ್ತಿದ್ದರೂ ಒಂದು ಕೈ ಮೇಲೆ. ಹೆಣ್ಣು ಮಕ್ಕಳು ತಗ್ಗಿ ಬಗ್ಗಿ ನಡೆಯಬೇಕು. ಮನೆಯ ಎಲ್ಲ ಕೆಲಸಗಳನ್ನು ಹೆಣ್ಣು ಮಕ್ಕಳು ಮಾಡಬೇಕು. ಗಂಡು ಮಕ್ಕಳು ಹೊರಗೆ ದುಡಿದು ತರುವರು, ಅವರೆಲ್ಲ ಮನೆಯ ಕೆಲಸ ಮಾಡಬಾರದು ಎನ್ನುವ ಮನೋಭಾವವಿತ್ತು. ಆದರೆ ಈಗ ಹಾಗಿಲ್ಲ, ಹೆಣ್ಣು ಮಕ್ಕಳು ಗಂಡು ***(ಪುಟ 16ಕ್ಕೆ...)***

# ಪ್ರವಾಸ ವೈವಿಧ್ಯ



✍ ಡಾ. ಸುಮಾ ದ್ವಾರಕಾನಾಥ್

## ಕನಸಿನಲ್ಲೂ ಕಾಣದಿದ್ದ ಅಮೇರಿಕ ಪ್ರವಾಸ

ಯೂರೋಪಿನ ಪ್ರವಾಸ ತಮ್ಮ ಪ್ರಹ್ಲಾದ ಮಾಡಿಸಿದರೆ, ತಂಗಿ ಅಂಬುಜ ಅಮೇರಿಕೆಯ ಪ್ರವಾಸವನ್ನು ನನಸಾಗಿಸಿದಳು. ಅಮೇರಿಕೆಯಲ್ಲಿದ್ದ ಮಗಳ ಮನೆಗೆ ಎರಡು ತಿಂಗಳು ಅಂಬುಜಾ ಹೋಗುವವಳಿದ್ದಳು. ಹಾಗೇ ಒಂದು round ಅಮೇರಿಕೆಯನ್ನು ಸುತ್ತಿಬರುವ ಆಸೆಯೂ ಇತ್ತು. ಇಲ್ಲಿಂದಲೇ Thomas cook contact ಮಾಡಿ 20 ದಿನದ tour plan ಮಾಡಿದ್ಲು. ಅವಳೊಬ್ಬಳೇ ಹೋಗೋದಕ್ಕಿಂತ ನನ್ನನ್ನೂ ಜೊತೆಗೆ ಕರೆದಳು. ಯಥಾ ಪ್ರಕಾರ ನನ್ನ ದೌರ್ಬಲ್ಯ ಹಣ. ನಾನು ಖಡಾಖಂಡಿತವಾಗಿ ಇಲ್ಲ ಎಂದೆ. ನನ್ನ ತಮ್ಮ, ಅವಳು ಮತ್ತು ಅವಳ ಮಗಳು ಸೇರಿ ನನ್ನನ್ನು ಹೊರಡಿಸಿದರು. ನನ್ನ ಪ್ರಕಾರ ಈ package, costly ಅಂತ. ಅವರು ಮಧ್ಯಾಹ್ನ ಊಟ ಕೊಡುತ್ತಿರಲಿಲ್ಲ. ಅದೂ ಒಂದು drawback?. ಎಷ್ಟು ಹೇಳಿದರೂ ಬಿಡದೆ ಹೊರಡಿಸೇ ಬಿಟ್ಟಳು.

ಗಣೇಶನ ಮದುವೆಗೆ ನೂರೆಂಟು ವಿಘ್ನ ಅನ್ನೋ ಹಾಗೆ, ಹೊರಡೋ ತನಕ ಪರಿಪಾಟ್ಲು ಪಡಬೇಕಾಯ್ತು. ಅವಳು ಊರಿಗೆ ಹೊರಡುವ ಮುಂಚೆ formalities ಮುಗಿಸಬೇಕಾಗಿತ್ತು. ಇಬ್ರೂ ಬೆಂಗಳೂರು (ಜಯನಗರದ)ಆಫೀಸಿಗೆ ಹೋದೆವು. ಅಲ್ಲೋ ನಮಗೆ, ಅವರಿಗೆ ಮಾತಿನ ಹೊಂದಾಣಿಕೆಯಾಗಲೇ ಇಲ್ಲ. ಇವಳು ಊರಿಗೆ ಹೊರಡುವ ಮುಂಚೆ ಒಂದು meeting ಇಡ್ತಾರೆ ಅನ್ನೋದು ಇವಳ ಯೋಚನೆ. ಅವರೋ ಇದು pan india, sanfransisco ನಿಂದಾನೇ ಟೂರ್ ಶುರುವಾಗುತ್ತೆ ಅಂತ ಅವರು. ಅಂತೂ ಗೊಂದಲದಲ್ಲೇ ಫಾರ್ಮ್ ತುಂಬಿಸಿದ್ದಾಯ್ತು. ಇಲ್ಲಿಂದ ಅವರ too & fro charge ಜಾಸ್ತಿ ಅಂತ, ನಾನೊಬ್ಬಳೇ ಆದರಿಂದ ಬೇರೆ ಪ್ರಯತ್ನಿಸೋಣ ಅಂದ್ಕೊಂಡ್ವಿ. ಇಷ್ಟರ ಮಧ್ಯೆ ನನ್ನ ಕಸಿನ್ ನಮ್ಮ ಜೊತೆ ಸೇರಿಕೊಂಡಳು. ಅವಳ ಅಳಿಯ ಏರ್ ಇಂಡಿಯಾ ಟಿಕೆಟ್ ಚೀಪ್ ಅಂತ ಅವಳಿಗೆ ಮಾಡಿಸಿ ಬಿಟ್ಟರು. ಅವಳ ಮಗಳು ಓಡಾಡಿ ವೀಸಾನೂ ಕೊಡಿಸಿಬಿಟ್ಟಳು. ತಂಗಿ ಆಗಲೇ ಡಲ್ಲಾಸ್ ತಲುಪಿಯಾಗಿತ್ತು. ನಾನೊಬ್ಬಳೇ ದಾರಿ ಕಾಣದೆ ಉಳಿದೆ.

ಇನ್ನೊಂದು ಸಮಸ್ಯೆಯೂ ಉದ್ಭವಿಸಿತ್ತು. ಡೊಂಬಿವಿಲಿಯ ನನ್ನ ಗೆಳತಿಯ ತಮ್ಮ ಮುಂಬೈನ ಆ ಆಫೀಸಿನಲ್ಲಿ ಸೀನಿಯರ್ ಮ್ಯಾನೇಜರ್ ಆಗಿದ್ರು. ಅವರ ಪರಿಚಯದಿಂದ ಸ್ವಲ್ಪ discount ಸಿಗಬಹುದೇನೋ ಅಂತ ನನ್ನ ಆಸೆ. ಆದರೆ ಆಗಿದ್ದೇ ಬೇರೆ. ಆ unitನ ಆದಾಯ ಕಮ್ಮಿಯಾಗುತ್ತದೆಂದು ನನ್ನನ್ನೇ ನಿರ್ಲಕ್ಷ್ಯ ಮಾಡಿಬಿಟ್ಟರು. ವೀಸಾ, ಹೊರಡುವ 8 ದಿನ ಮುಂಚೆಯೂ ಸಿಗುವುದು ಕಷ್ಟವಾಯಿತು. ಬೆಂಗಳೂರು, ಚೆನ್ನೈನಲ್ಲಿ ವೀಸಾ ಸಿಗೋದು ಅಸಾಧ್ಯ ಅಂತ ಹೇಳಿ ಜಾರಿಕೊಂಡು ಬಿಟ್ಟರು. ಆಫ್ರಿಕಾದಲ್ಲಿದ್ದ ಮಗಳು 8000ರೂ. ಗಾಗಿ ನಿನ್ನ ಟ್ರಿಪ್ ನಿಲ್ಲಿಸಬೇಡ, ನಾನು ಕಳಿಸ್ತೀನಿ ಅಂತ 25,000 ರೂ ಕಳಿಸಿದ್ಲು. ಅವಳಿಗೇನೂ ಅಂದ್ರೆ ನನ್ನ ತಂಗಿ ಜೊತೆ ಬಿಟ್ರೆ ನನ್ನನ್ನು ಯಾರೂ ಕರ್ಕೊಂಡು ಹೋಗಲ್ಲ, chance ಬಿಡಬೇಡ ಅಂತ. ಮತ್ತೆ 8000 ರೂ extra ಕೊಟ್ಟಿದ್ದಕ್ಕೆ 2 ದಿನದಲ್ಲೇ ವೀಸಾ stamp ಆಗಿ ಬಂತು. ನಮ್ಮ ಮನೆ ಇರುವುದು ಪಲಾವಾ. ವೀಸಾ ಡೊಂಬಿವಿಲಿ ಪೋಸ್ಟ್ ಆಫೀಸಿಗೆ ಬರುವ ತನಕ ಮಗನ ಮೊಬೈಲಿಗೆ ಮೆಸೇಜ್ ಬರುತ್ತಿತ್ತು. ಇನ್ನೇನು ತಂದುಕೊಡ್ತಾನೆ ಅಂತ ಎರಡು ದಿನ ಕಾದು, ಅಲ್ಲಿಗೆ ಹೋದರೆ, ನಮಗೆ shock. ಅವರು ಅದನ್ನು ವಾಪಸ್ಸು ಕಳಿಸುವ ತಯಾರಿಯಲ್ಲಿದ್ದರು. 8 ಕಿ.ಮೀ. ದೂರ ಪಲಾವಾಗೆ ಬರಲು ಬೇಜವಾಬ್ದಾರಿಯಿಂದ, ಮನೆ ಬೀಗ ಹಾಕಿತ್ತು ಅಂತ ಕೂತಲ್ಲೇ ಷರಾ ಬರೆದುಬಿಟ್ಟಿದ್ದ ಪೋಸ್ಟ್ ಮ್ಯಾನ್. ಮನಸ್ಸಿನಲ್ಲೇ ಬೈಕೊಂಡು ತೊಗೊಂಡು ಬಂದದ್ದಾಯ್ತು.

ಈಗ ಟಿಕೆಟ್ ಸಮಸ್ಯೆ. ಮತ್ತೆ ಅವರನ್ನೇ ಸಂಪರ್ಕಿಸಿದ್ದಾಯ್ತು. ನನ್ನ ಅದೃಷ್ಟವೋ ಎಂಬಂತೆ ಎರಡೂ ಕಡೆಯ ಟಿಕೆಟ್ ಗೆ 85000 ರೂ ನಲ್ಲೇ ಸಿಕ್ಕಿತು. (ಟೂರ್ ಪ್ಯಾಕೇಜ್‌ನಲ್ಲಿ ಒಂದೂವರೆ ಲಕ್ಷ ಕೇಳಿದ್ರು) ನಾನು ಇಲ್ಲಿಂದ ಸಂಜೆ ಮುಂಬೈ ಬಿಟ್ಟರೆ ಮಾರನೆದಿನ ಬೆಳಗ್ಗೆ 9 ಗಂಟೆಗೆ (transit) ದುಬೈನಿಂದ ಹೊರಡಬೇಕಾಗಿತ್ತು. ರಾತ್ರಿ ಎಲ್ಲಿ ಕಳೆಯುವುದು? ಮತ್ತೆ ದೇವರ ಕೃಪೆ. ನನ್ನ ಕಸಿನ್‌ನ ಗೆಳತಿ ವಿಮಾನಯಾನದ ಆಫೀಸಿನಲ್ಲಿದ್ದಳು. ಅವಳ ಸೂಚನೆಯ ಮೇರೆಗೆ ಟೂರಿಸ್ಟ್ ಕಂಪನಿಯವರೇ ಅಷ್ಟು ಗಂಟೆಯ ಮಧ್ಯಂತರವನ್ನು ಸಂಭಾಳಿಸಬೇಕೆಂದು ತಿಳಿಯಿತು. ಮತ್ತೆ ಅವರಿಗೇ ವರಾತ ಬಿದ್ದೆ. ವಿಧಿಯಿಲ್ಲದೆ arrange ಮಾಡಿಕೊಟ್ಟರು. ಇಷ್ಟೆಲ್ಲಾ ಪರಿಪಾಟಲುಪಟ್ಟು ಹೊರಟಿದ್ದಾಯ್ತು. ಮಗ, ಸೊಸೆ, ಮೊಮ್ಮಗ ಬಂದು ಬೀಳ್ಕೊಟ್ಟರು. ವ್ಹೀಲ್ ಚೇರಿನವನು ಕನ್ನಡದವನೇ ಆಗಿದ್ದು, ಇಲ್ಲಿಯ ಕನ್ನಡ ಶಾಲೆಯಲ್ಲಿ ಓದಿದವನೆಂದು ತಿಳಿದು ಖುಷಿಯಾಯಿತು. ಸಂಜೆ flight ಆದ್ರಿಂದ ರಾತ್ರಿ ದುಬೈ ತಲುಪಿದ್ದಾಯ್ತು. ಅಲ್ಲೂ ವ್ಹೀಲ್ ಚೇರ್ ಸಹಾಯದಿಂದ ಸುಮಾರು 2ಕಿ.ಮೀ. ದೂರದ ಏರ್ ಪೋರ್ಟ್ ದಾಟಿ ಹೊರಗೆ ಬಂದಿದ್ದಾಯಿತು. ಅಲ್ಲಿ ಹೋಟೆಲ್‌ಗೆ ಕರೆದೊಯ್ಯಲು ಬಸ್ ವ್ಯವಸ್ಥೆ ಇತ್ತು. ಹೋಟೆಲ್‌ನಲ್ಲಿ ಇಷ್ಟು ಜನ ಸಂತೆ ಸೇರಿದ್ದರೆಂದರೆ ರಾತ್ರಿ ಹಗಲು ತಿಳಿಯುತ್ತಿರಲಿಲ್ಲ.

ಇಲ್ಲೊಂದು ತಮಾಷೆಯಾಯಿತು. ರೂಮ್ ತೋರಿಸಲು ಲಗ್ಗೇಜ್ ಜೊತೆ ಬಂದ security ಎಲ್ಲಿಂದ ಬಂದಿದ್ದೀರಿ ಅಂತ ಸಹಜವಾಗಿ ವಿಚಾರಿಸಿದ. ನಾನು india ಎಂದೆ. ಅಲ್ಲಿಯವರೇನೋ ಅಂತ, ನಾನೂ ಕೇಳಿದೆ, ಅದಕ್ಕೆ ಅವನು ಕೊಟ್ಟ ಉತ್ತರ ಗಾಭರಿ ಮತ್ತು ನಗು ಎರಡೂ ಒಟ್ಟಿಗೆ ಆಯಿತು. ನಾನು ನಿಮ್ಮ ಶತ್ರು ಪಾಕಿಸ್ತಾನದವನು ಅಂದ. ನನಗೆ ನಿನಗೆ ಏನಪ್ಪಾ ಶತೃತ್ವ ಅಂದು ನಕ್ಕುಬಿಟ್ಟೆ.

ಸೂಟ್ ಕೇಸ್ ರೂಮಿನಲ್ಲಿಟ್ಟು ಇಟ್ಟು, ಕೆಳಗೆ ಊಟಕ್ಕೆ ಬಂದೆ. ಹಣ್ಣು ಹಾಲು, ಬೇಕರಿ ಐಟಮ್‌ಗಳು ಸಾಕಷ್ಟು ಇತ್ತು. ಸಸ್ಯಾಹಾರವನ್ನೇ ಹುಡುಕಿ ಹೊಟ್ಟೆ ತುಂಬಿಸಿದ್ದಾಯ್ತು. ಮತ್ತೆ ರೂಮಿಗೆ ಹೋದರೆ ಅಸಾಧ್ಯ ಚಳಿ. ಎ.ಸಿ. ಬೇರೆ ಜೋರಾಗಿತ್ತು. ಒಬ್ಬಳೇ ಹೊರದೇಶದಲ್ಲಿ ಏನಾದರೂ ಆಗಬಹುದೆಂಬ ಭಯವೂ ಕಾಡುತ್ತಿತ್ತು. ಆ ಚಳಿಯಲ್ಲಿ ರಾತ್ರಿ ಕಳೆಯುವುದೂ ಕಷ್ಟವಾಗಿತ್ತು. ಅರ್ಧ ರಾತ್ರೀಲಿ ಮತ್ತೆ ಫೋನ್ ಮಾಡಿ house keeper ನ ಕರೆಸಿದೆ. ಅವನು ಬಂದು ಸರಿ ಮಾಡಿ ಹೋದ. ಅವನು ಬಂದು ಹೋಗುವ ತನಕ ಮನಸ್ಸಿನಲ್ಲೇ ದೇವರ ಪ್ರಾರ್ಥನೆ ಮಾಡುತ್ತಿದ್ದೆ.

ಬೆಳಗ್ಗೆ ಬೇಗ ಎದ್ದು ಸ್ನಾನ ಮಾಡಿ, ಕೆಳಗೆ ತಿಂಡಿ ಕಾಫಿ ಮುಗಿಸಿ ಬಸ್‌ನಲ್ಲಿ ಬಂದು ಏರ್ ಪೋರ್ಟ್ ತಲುಪಿದೆ. formalities ಮುಗಿಸುವಾಗ ನಾನು ಹಾಕಿಕೊಂಡಿದ್ದ single piece ಗೋಸಾಯಿ ಲಂಗವನ್ನು ನೋಡಿ ಅಲ್ಲಿಯ checking unit ನವಳು ಒಂದು 10 ನಿಮಿಷ ಅದನ್ನೇ ಹೊಗಳುತ್ತಾ ನಿಂತು ಬಿಟ್ಟಳು. ಹೀಗೂ ಉಂಟಾ ಅಂತ ನನಗೆ ನಗು ಮನಸ್ಸಿನಲ್ಲೇ ಅಂದುಕೊಂಡೆ ನಮ್ಮ ಡೊಂಬಿವಿಲಿಗೆ ಬಾ, ಎಷ್ಟು ಬೇಕೋ ಅಷ್ಟು ತೊಗೊಬಹುದು ಅಂತ. ಅಲ್ಲಿ ಕೆಲವು Thomas cook backsack ಗಳನ್ನು ನೋಡಿ ಸ್ವಲ್ಪ ಸಮಾಧಾನವಾಯಿತು. ಭಾರತದ ಬೇರೆ ಬೇರೆ ಭಾಗಗಳಿಂದ ಬಂದಿದ್ದ

ಅವರನ್ನೆಲ್ಲಾ ಪರಿಚಯ ಮಾಡಿಕೊಂಡೆ. ಮತ್ತೆ 16 ಗಂಟೆಗಳ ಪ್ರಯಾಣ. sanfransisco ತಲುಪುವ ಹೊತ್ತಿಗೆ ಸಂಜೆಯಾಗಿತ್ತು. ಪ್ರಯಾಣದಲ್ಲಿ ಮತ್ತೊಮ್ಮೆ sound of music ಹಳೆಯ ಸಿನಿಮಾ ನೋಡಲು ಸಿಕ್ಕಿತು. Enjoy ಮಾಡಿದ್ದಾಯ್ತು. ಪ್ರಯಾಣಿಕರ ದಂಡೇ ಜಾಸ್ತಿಯಾಗಿ, airportನಲ್ಲಿ ವೀಲ್ ಚೇರ್‌ಗಳು ಮತ್ತು attenders (ಎಲ್ಲಾ south koreans) shortage ಆಗಿತ್ತು. ಸರಿ ಲಟಾಪಟಿ ಶುರುವಾಯ್ತು. ಮೇಲಿನ ಆಫೀಸರ್ ಬಂದು ಸಮಾಧಾನ ಮಾಡಬೇಕಾಯ್ತು. ಸರಿ ಶುರುವಾಯ್ತು relay race. ಮೂರು ನಾಲ್ಕು ವ್ಹೀಲ್ ಚೇರ್‌ಗಳನ್ನು ಅಷ್ಟು ದೂರ ತಳ್ಳಿಕೊಂಡು ಹೋಗಿ ಬಿಡುವುದು. ಮತ್ತೆ ಓಡಿ ಹೋಗಿ ಹಿಂದೆ ನಿಂತಿದ್ದವರನ್ನು ಕರೆದುಕೊಂಡು ಬರುವುದು. ಹೀಗೆ ಕಸ್ಟಮ್ಸ್ ತನಕ ಬರೋವರೆಗೆ ಆಟ ನಡೆಯಿತು.

ಮುಂದೆ ಲಗ್ಗೇಜ್ ತೆಗೆದುಕೊಳ್ಳಲೂ ಗಲಾಟೆ. ವೀಲ್ ಚೇರ್ ಕಾಪಾಡಿಕೊಳ್ಳಬೇಕು, ಜೊತೆಗೆ ಲಗ್ಗೇಜ್. ನಾನು ಕುರ್ಚಿಯಿಂದ ಎದ್ದು,ಎದುರಿಗೆ ಬಂದ ಲಗ್ಗೇಜ್ ತೆಗೆದುಕೊಳ್ಳಲು ಹೋದರೆ ಅವನ ಕೈಲಿ ಬೈಸಿಕೊಂಡೆ. ಹಾಗೆ ಅವರ ಕೆಲಸ ನಾವು ಮಾಡಿದರೆ, ಪೋಲೀಸಿನವರು ಅವರಿಗೆ ದಂಡ ಹಾಕುತ್ತಾರೆ ಅಂತ. ಅಂತೂ ಹೊರಗೆ ಬಂದರೆ Thomas cook ನ guide ಸುಶ್ಮಾಣ our ಬಾವುಟದೊಂದಿಗೆ ನಿಂತಿದ್ದಳು. ಎಲ್ಲರನ್ನೂ ಒಟ್ಟು ಮಾಡಿ ಒಂದು ಕಡೆ ನಿಲ್ಲಿಸಿದಳು. ಅಲ್ಲೋ ನಮ್ಮನ್ನು ಹಾರಿಸಿಕೊಂಡು ಹೋಗುವಷ್ಟು ಜೋರಾದ ತಣ್ಣಗಿನ ಗಾಳಿ ಬೀಸುತ್ತಿತ್ತು. ಆ ಊರಿಗೆ ಫ್ಯಾನ್ ಮತ್ತು ಎ.ಸಿ.ಯ ಅವಶ್ಯಕತೆಯಿಲ್ಲವೆಂದು ಕೇಳಿ ನಮಗೆ ಆಶ್ಚರ್ಯವಾಯಿತು. ಗಡಗಡ ನಡುಗುತ್ತಾ ಅರ್ಧಗಂಟೆ ತಡವಾಗಿ ಬಂದ ಬಸ್ಸಿಗೆ ಹತ್ತಿಕೊಂಡೆವು.

ಊರೆಲ್ಲಾ ಸುತ್ತಿ ಊರ ಹೊರಗಡೆ ಇರುವ ಒಂದು ಹೋಟೆಲ್ ನಲ್ಲಿ ನಮ್ಮ ವಾಸ್ತವ್ಯವಿತ್ತು. ಆಗಲೇ ನನ್ನ ತಂಗಿ ಮತ್ತು ಮತ್ತು ಕಸಿನ್ ಅಲ್ಲಿ ಬಂದು ನಮಗಾಗಿ ಕಾಯುತ್ತಿದ್ದರು. ತಂಗಿ, ಮಗಳ ಮನೆಯಿಂದ (ಡಲ್ಲಾಸ್) ಮತ್ತೆ ಕಸಿನ್ (california) ಇಂದ anhose ಗೆ ಎರಡು ದಿನ ಮುಂಚಿತವಾಗೇ ಬಂದಿದ್ದರು. ಹಾಗಾಗಿ ಅವರು ಹೋಟೆಲ್ ತಲುಪಿದ್ದರು. ಇದರ ಮಧ್ಯೆ ನನ್ನ ಮೊಬೈಲ್ ಕೈ ಕೊಟ್ಟು ಯಾರಿಗೂ ನಾನು ಮುಂಬೈ ಬಿಟ್ಟಮೇಲೆ ನನ್ನನ್ನು ಸಂಪರ್ಕಿಸಲೇ ಆಗದೆ panic ಆಗಿದ್ರು. ಅವರಿಗೆಲ್ಲಾ ತಕ್ಷಣ ಸುದ್ದಿ ಮುಟ್ಟಿಸಿದ್ದಾಯ್ತು.

Sanhose ಯಿಂದ ನನ್ನ ಕಸಿನ್ ಡೋಕ್ಲಾ, ಸ್ವೀಟ್ಸ್ ಒಂದು ಸುಂದರವಾದ ಹ್ಯಾಂಡ್ ಬ್ಯಾಗ್ ನನಗಾಗಿ ಕಳಿಸಿಕೊಟ್ಟಿದ್ದಳು. ಪ್ರೀತಿಯಿಂದ ಕಳಿಸಿದ್ದ ತಿಂಡಿ ತಿಂದು ನನ್ನಪ್ರಯಾಣದ ವಿವರ ಹೇಳಿದ್ದಾಯ್ತು. ರಾತ್ರಿ ಊಟದ ಸಮಯದಲ್ಲಿ ನಮ್ಮ itenery ಯನ್ನು ವಿವರವಾಗಿ ಗೈಡ್ ತಿಳಿಸಿದಳು.

ಮಾರನೆಯ ದಿನ ಬೆಳಗ್ಗೆ bayಗೆ ಮೊದಲು ಕರೆದುಕೊಂಡು ಹೋದರು. ಸ್ವಚ್ಛ ನೀರು ಬೀಚ್, ಭೂಮಿ, ಸೂರ್ಯ, ಆ ನಿಸರ್ಗದ ಮಡಿಲಲ್ಲಿ ಒಳ್ಳೆ ಬೆಳಗ್ಗೆಯಾಗಿತ್ತು. ಯಥಾ ಪ್ರಕಾರ selfie ಗಳು ಶುರುವಾಯಿತು. ನಮ್ಮ ಬಂಗಾಳ ಕೊಲ್ಲಿಯ ಹಾಗೆ ಅಲ್ಲಿಯೂ ಸಾಗರದ ನೀರು ಒಳನುಗ್ಗಿ ಭೂಮಿಯನ್ನು ಒಳಮುಖವಾಗಿ ಒತ್ತರಿಸಿದೆ. ಅಲ್ಲಿಂದ ಮುಂದೆ ಗಲಾಟೆ, ಗಲೀಜುಗಳಿರುವ ಮನುಷ್ಯನ ಮೀನು ಮಾರುಕಟ್ಟೆಗೆ ಕರೆದುಕೊಂಡು ಹೋದರು. Fisherman´s wharf ಅಲ್ಲಿ ಗದ್ದಲವೋ ಗದ್ದಲ. ಇದೊಂದು ಜಲ ಮಾರ್ಗ. ದೂರದಲ್ಲಿ ನಿಂತ ಹಡಗುಗಳು ಕಾಣಿಸಿದವು. ಅಲೇ ಊಟ ಮಾಡಬೇಕಾದ್ದರಿಂದ ನಾವು ತೆಗೆದುಕೊಂಡು ಹೋದ ಊಟವನ್ನೂ ತಿನ್ನಲು ಮನಸ್ಸು ಬರಲಿಲ್ಲ. ಆ ವಾಸನೆ ಎಲ್ಲೆಂದರಲ್ಲಿ ತಿಂಡಿ ತಿಂದು ಬಿಸಾಕಿದ ಜನ, ಹೊರಗೆ ಬಂದರೆ ಸಾಕೆನ್ನಿಸಿತ್ತು.

ಮುಂದೆ ಮಧ್ಯಾಹ್ನ golden gate bridgeಗೆ ದೋಣಿಯಲ್ಲಿ ಕರೆದುಕೊಂಡು ಹೋದರು. 1.7ಮೈಲಿ ಅಗಲ ಇರುವ, 4200 ಅಡಿ ಉದ್ದವಿರುವÀ sanfransisco ಮತ್ತು ಫೆಸಿಫಿಕ್ ಸಾಗರವನ್ನು ಸೇರಿಸುವ ಜಗತ್ತಿನಲ್ಲೇ ಒಂದು ದೊಡ್ಡ ತೂಗು ಸೇತುವೆ. ಇದನ್ನು 1937ರಲ್ಲಿ ಜೋಸೆಫ್ ಬಿ. ಸ್ಟ್ರಾಸ್ ಎನ್ನುವವನು ಕಟ್ಟಿದ್ದಾನೆ. ಇದು ಜಗತ್ತಿನ ಏಳು ಅದ್ಭುತಗಳಲ್ಲಿ ಒಂದು ಎಂದು ಪ್ರಸಿದ್ಧಿ ಪಡೆದಿದೆ.

ಹತ್ತಿರದಲ್ಲೇ ಇದ್ದ redwood tree ಮಾತ್ರ ನೋಡಲಾಗಲಿಲ್ಲ. ಅದು ನೋಡುವ ಆಸೆ ಇತ್ತು ಆದರೆ ನಮ್ಮ ಟೂರ್ ಪ್ಯಾಕೇಜ್ ನಲ್ಲಿರಲಿಲ್ಲ.ಇದನ್ನು silicon valley ಎಂದೂ ಕರೆಯುತ್ತಾರೆ. ಇಲ್ಲಿ apple, google ಮುಂತಾದವುಗಳ head office ಇಲ್ಲೇ ಇವೆ.


ಮುಂದಿನ ಪ್ರಯಾಣ ಲಾಸ್ ಏಂಜಲೀಸ್‌ಗೆ. ಇದು ನ್ಯೂಯಾರ್ಕ್ ಸಿಟಿಯನ್ನು ಬಿಟ್ಟರೆ ಎರಡನೆಯ ದೊಡ್ಡ ಸಿಟಿ. ಇಲ್ಲಿ ದೇಶದ ಫಿಲ್ಮ್ ಮತ್ತು ಟೆಲಿವಿಷನ್ ಚಿತ್ರೀಕರಣ ಕೇಂದ್ರವಾಗಿದೆ. ಪ್ಯಾರಾಮೌಂಟ್ ಪಿಕ್ಚರ್ಸ್ ಹತ್ತಿರ, ಬೆಟ್ಟದ ಮೇಲೆ ನೆಟ್ಟಿರುವ ದೊಡ್ಡದಾದ ಹಾಲಿವುಡ್ ಹೆಸರಿನ ಬೋರ್ಡ್ ಊರಿನ ಎಲ್ಲಾ ಭಾಗಗಳಿಂದಲೂ ವಿಜೃಂಭಿಸುತ್ತದೆ. ಡೋಲ್ಬಿ ಥಿಯೇಟರ್ ಮುಂದೆ ಇರುವ walk of fame, ಸಿನಿತಾರೆಗಳ ಹೆಸರುಗಳನ್ನು ನಕ್ಷತ್ರಗಳ ಮೂಲಕ ಇಡೀ ಪಾದಚಾರಿ ರಸ್ತೆಯ ಮೇಲೆ ಚಿತ್ರಿಸಿ ಗೌರವ ತೋರಿಸಿದ್ದಾರೆ. ಆ ರಸ್ತೆಯಲ್ಲೇ ನಮ್ಮ ರೇಟಿಗೆ ಸಿಗಬಹುದಾದ 1 ಡಾಲರ್ ಮೊಮೆಂಟೋಗಳನ್ನು ಖರೀದಿಸಿದೆವು. ಜೊತೆಗೆ ಹೊಟ್ಟೆಯೂ ಕೂಗುತ್ತಿದ್ದುದರಿಂದ ಹಿಂದೆ ಇದ್ದ ಗಾರ್ಡನ್ ನಲ್ಲೇ ಕೂತು ನಮ್ಮ M.T.R. ತಿಂಡಿಗಳನ್ನು, ಹೋಟೆಲ್‌ನಲ್ಲಿ ಬಿಸಿ ನೀರು ತಂದು ಬಿಸಿ ಮಾಡಿ ತಿಂದಿದ್ದಾಯಿತು. ಸಾಯಂಕಾಲ ಒಂದು ಸುತ್ತು ನಮ್ಮನ್ನು ಸಿನಿತಾರೆಗಳ ಬಂಗಲೆಗಳ ದರ್ಶನ (beverly hills) ಮುಂಬಯಿಯ ಹಾಗೇ ಮಾಡಿಸಿದರು. ಅಲ್ಲಿಯ ರಸ್ತೆಗೆ bullevad ಎನ್ನುತ್ತಾರೆ.

ಮಾರನೆ ದಿನ ಬೆಳಗ್ಗೆ universal studio ಗೆ ಹೋಗುವ ಕಾರ್ಯಕ್ರಮವಿತ್ತು.ಇದು ಕ್ಯಾಲಿಫೋರ್ನಿಯದಲ್ಲಿ 1915ರಲ್ಲೇ ಕಟ್ಟಿದ ಒಂದು ಐತಿಹಾಸಿಕ film studio tour ಮತ್ತು theme park. ಇದರ ಜೊತೆಗೆ ಅಲ್ಲಿ 5 ಉನ್ನತ studioಗಳೂ ಇವೆ. Paramount pictures , warner bros, walt disney ಮತ್ತು sony pictures. ನಮಗೆ ಮುಂಚೆಯೇ ಅಲ್ಲಿಯ ನಿಯಮಗಳನ್ನು ತಿಳಿಸಿದ್ದರಿಂದ ಓಡಾಡಲು ಅನುಕೂಲವಾಯಿತು. ಜನಜಂಗುಳಿ ಸಾಕಷ್ಟಿತ್ತು. ಎಲ್ಲದಕ್ಕೂ ಹನುಮಂತನ ಬಾಲದ ಕ್ಯೂ ಮೊದಲಿಗೆ ಕ್ಯೂ ನಿಂತು ಒಂದು ಸುತ್ತು studio, ರೈಲಿನಲ್ಲಿ ನೋಡಿ ಬಂದೆವು. ಹಾಲಿವುಡ್‌ನ ಹಾರರ್ ಮೂವಿಯ ಚಿತ್ರಣದ ದೃಶ್ಯಗಳು, ಬಿದ್ದ ಏರೋಪ್ಲೇನ್, ಜಲಪಾತದ ದೃಶ್ಯ, ಗುಹೆ, ಬೆಂಕಿ ಹೀಗೇ ಮುಂತಾದವುಗಳ ನಡುವೆ ಹಾದು ಹೋಗುವಾಗ ಜನಗಳ exitement enjoy ಮಾಡಿದೆವು. ನಮಗೆ ಯಾವ ದೃಶ್ಯ ಬೇಕೋ ಅದನ್ನು ನಾವು select ಮಾಡಿಕೊಳ್ಳಬಹುದಾದ್ದರಿಂದ, ಅದ್ಭುತ ದೃಶ್ಯಗಳನ್ನು ಹೇಗೆ ಚಿತ್ರೀಕರಿಸುತ್ತಾರೆಂದು ತೋರಿಸುವ studio ಗೆ ಹೋದೆವು ಎಲ್ಲಾ ಅರ್ಧಗಂಟೆ ಕಾರ್ಯಕ್ರಮಗಳೇ. ಅಲ್ಲಿಂದ viking ಬಹಳ wild ಇದ್ದುದರಿಂದ ನಮಗೇನೂ ಇಷ್ಟವಾಗಲಿಲ್ಲ. Harry potter ತರಹ ಜಾಸ್ತಿ ಜನ ಇಲ್ಲದ ಕಡೆ 4–5 ಶೋಗಳನ್ನು ನೋಡಿ ಬಂದೆವು. ಮುಂದೆ ಸಿಕ್ಕಿದ್ದನ್ನು ತಿಂದು ಹೊಟ್ಟೆ ತುಂಬಿಸಿಕೊಂಡು, ಮಧ್ಯಾಹ್ನ jurasic park ಗೆ ಕ್ಯೂ ನಿಂತೆವು. ಸುಮಾರು ಮೂರು ಗಂಟೆಗಳ ಕಾಲ ನಿಂತ ಮೇಲೆ ನಮಗೆ ದೋಣಿಯಲ್ಲಿ ಹೋಗಲು ಸಿಕ್ಕಿತು. ಕಾಡಿನಲ್ಲಿ ನಡುನಡುವೆ ನಮ್ಮನ್ನು ವಿವಿಧ dinosar ಗಳು ನಮ್ಮ ಹತ್ತಿರ ಬಂದು ಹೆದರಿಸುತ್ತಿತ್ತು. ಅಷ್ಟರಲ್ಲಾಗಲೇ ಸಂಜೆಯಾದ್ದರಿಂದ ವಾಪಸ್ಸು ಬರಬೇಕಾಯ್ತು. studioವನ್ನು ನೋಡಲು ಕನಿಷ್ಟ ಪಕ್ಷ 8 ದಿನವಾದರೂ ಬೇಕು. ಒಂದು ದಿನದಲ್ಲಿ ಬರೀ ಸುತ್ತಾಡಿದ್ದೇ ಬಂತು. ಅಲ್ಲಿಯ ಮ್ಯಾಪ್ ಕೊಟ್ಟಿದ್ರೂ ಸಹಿತ ನಮಗೆ ಸರಿಯಾಗಿ ಗೈಡ್ ಮಾಡುವವರು ಯಾರೂ ಇರಲಿಲ್ಲ. ಅಂತೂ ನಾವು ಹೋಗಿ ಬಂದೆವು ಎನ್ನುವುದೊಂದೇ ಸಮಾಧಾನ.

**(ಮುಂದಿನ ಸಂಚಿಕೆಯಲ್ಲಿ ಲಾಸ್ ವೇಗಾಸ್, ನಯಾಗರಾ, ನ್ಯೂಯಾರ್ಕ್ ಮತ್ತು ವಾಷಿಂಗ್ಟನ್ ಪ್ರವಾಸ ಮುಂದುವರೆಯುವುದು)**

# ಮಾತುಂಗ ಕರ್ನಾಟಕ ಸಂಘದ ಆವರಣಕ್ಕೆ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸದಸ್ಯರ ಭೇಟಿ, ಸಂವಾದ ಕಾರ್ಯಕ್ರಮ

## ಹೊರನಾಡಿನಲ್ಲಿ ಕನ್ನಡ– ಕನ್ನಡಿಗ– ಕರ್ನಾಟಕ ಈ ತತ್ವಗಳ ಬಲವರ್ಧನೆಗೆ ಕರ್ನಾಟಕ ಸಂಘ ಕೊಟ್ಟ ಕೊಡುಗೆ ದೊಡ್ಡದು: ಪ್ರೊ. ಜಿ. ಎನ್. ಉಪಾಧ್ಯ



ಮಾತುಂಗ ಕರ್ನಾಟಕ ಸಂಘ ಮುಂಬೈ ಕನ್ನಡಿಗರ ಹೆಮ್ಮೆಯ, ಹಿರಿಯ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿ ಇದೆ. ಕಳೆದ ಒಂಬತ್ತು ದಶಕಗಳಿಗೂ ಮಿಕ್ಕ ಅವಧಿಯಲ್ಲಿ ಈ ಸಂಸ್ಥೆ ಮಾಡಿದ ಕನ್ನಡ ಕಾಯಕ, ಸಾಂಸ್ಕೃತಿಕ ಪರಿಚಾರಿಕೆ ನಾಡಿಗೆ ಮಾದರಿಯಾಗಿದೆ. ಹೊರನಾಡಿನಲ್ಲಿ ಕನ್ನಡ–ಕನ್ನಡಿಗ– ಕರ್ನಾಟಕ ಈ ತತ್ವಗಳ ಬಲವರ್ಧನೆಗೆ ಕರ್ನಾಟಕ ಸಂಘ ಕೊಟ್ಟ ಕೊಡುಗೆ ದೊಡ್ಡದು. ಕರ್ನಾಟಕ ಸಂಘದ ಹೊಸ ಕಟ್ಟಡ ತಲೆಯೆತ್ತಿ ನಿಲ್ಲುತ್ತಿರುವ ಈ ಹೊತ್ತಿನಲ್ಲಿ ಸಮಸ್ತ ಮುಂಬೈ ಕನ್ನಡಿಗರು ಸಂಘದ ಬೆಂಬಲಕ್ಕೆ ನಿಲ್ಲಬೇಕಾದದ್ದು, ಯಥಾಸಾಧ್ಯ ಆರ್ಥಿಕ ಸಹಾಯವನ್ನು ಮಾಡಬೇಕಾದದ್ದು ಎಲ್ಲರ ಕರ್ತವ್ಯ. ಇವತ್ತು ವಿಭಾಗದ ವಿದ್ಯಾರ್ಥಿಗಳೊಂದಿಗೆ ಹೊಸದಾಗಿ ತಲೆ ಎತ್ತುತ್ತಿರುವ ಸಂಘದ ಆವರಣವನ್ನು ನೋಡಿ ಮನಸ್ಸು ತುಂಬಿ ಬಂತು. ಆದಷ್ಟು ಬೇಗ ಈ ಕಟ್ಟಡದ ಕೆಲಸ ಮುಗಿಯುವಂತಾಗಲಿ. ಅದರ ಹಿಂದಿನ ವೈಭವ ಮತ್ತೆ ಮರುಕಳಿಸಲಿ ಎಂದು ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಪ್ರೊ. ಜಿ. ಎನ್. ಉಪಾಧ್ಯ ಅವರು ಶುಭ ಹಾರೈಸಿದರು.

ಅವರು ಮಾ. 1ರಂದು ರವಿವಾರ ಮಧ್ಯಾಹ್ನ ಮಾತುಂಗದ ಕರ್ನಾಟಕ ಸಂಘದ ಆವರಣಕ್ಕೆ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ವಿದ್ಯಾರ್ಥಿಗಳೊಂದಿಗೆ ಭೇಟಿ ನೀಡಿದರು. ರಾಷ್ಟ್ರೀಯ ಶಿಕ್ಷಣ ನೀತಿ 2020 ಯೋಜನೆಯ ಅನ್ವಯ ಸಮುದಾಯದ ಕಡೆಗೆ ನಮ್ಮ ನಡಿಗೆ ಎಂಬ ನೆಲೆಯಲ್ಲಿ ಈ ಭೇಟಿಯನ್ನು ಆಯೋಜಿಸಲಾಗಿತ್ತು.



ಅವರು ಕರ್ನಾಟಕ ಸಂಘದ ಪದಾಧಿಕಾರಿಗಳೊಂದಿಗೆ ಮಾತನಾಡುತ್ತಾ ಒಂದು ಊರಿಗೆ ಮಹತ್ವ ಬರುವುದು ಅಲ್ಲಿರುವ ಸಂಘ ಸಂಸ್ಥೆಗಳಿಂದ, ವ್ಯಕ್ತಿಗಳಿಂದ ಮತ್ತು ಸ್ಮಾರಕಗಳಿಂದ. ಮುಂಬೈ ಕನ್ನಡಿಗರ ಮಾತೃ ಸಂಸ್ಥೆಯಂತೆ ಕರ್ನಾಟಕ ಸಂಘ ಕೆಲಸ ಮಾಡಿದೆ.

ಮುಂಬೈ ವಿವಿ ಕನ್ನಡ ವಿಭಾಗದ ಸ್ಥಾಪನೆಯಲ್ಲಿಯೂ ಕರ್ನಾಟಕ ಸಂಘ ಮಹತ್ವದ ಪಾತ್ರವನ್ನು ವಹಿಸಿದೆ. ಸದ್ಯ ಕರ್ನಾಟಕ ಸಂಘದ ಕಟ್ಟಡ ಕಾಮಗಾರಿ ಭರದಿಂದ ಸಾಗಿದೆ. 21ನೆಯ ಶತಮಾನದಲ್ಲಿ ಕನ್ನಡವನ್ನು ಹೊಸ ತಲೆಮಾರಿಗೆ ದಾಟಿಸುವ ನಿಟ್ಟಿನಲ್ಲಿ ಇಂತಹ ಸಂಸ್ಥೆಗಳು ಮುಂಬೈಗೆ ತೀರಾ ಅನಿವಾರ್ಯ. ಸಂಘದ ಕನ್ನಡ ಕಾಯಕಕ್ಕೆ ಮುಂಬೈ ವಿಶ್ವವಿದ್ಯಾಲಯ ಸದಾ ಬೆಂಬಲವಾಗಿ ನಿಲ್ಲುತ್ತದೆ ಎಂದು ಈ ಸಂದರ್ಭದಲ್ಲಿ ಅವರು ಕಟ್ಟಡ ಕಾಮಗಾರಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸಂಘವು ಒಂಬತ್ತು ದಶಕಗಳಿಂದ ಸಾಂಸ್ಕೃತಿಕವಾಗಿ ಸಾಹಿತ್ಯಕವಾಗಿ ಉನ್ನತ ಮಟ್ಟದ ಕಾರ್ಯಕ್ರಮಗಳನ್ನು ಮಾಡುತ್ತಾ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ. ಅದು ಜಾತ್ಯತೀತ ವಿನ್ಯಾಸದಲ್ಲಿ ಕ್ರಿಯಾಶೀಲವಾಗಿದೆ. ಮುಂಬಯಿ ಕನ್ನಡಿಗರ ಯಾವುದೇ ಚಟುವಟಿಕೆಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದೆ. ಪ್ರಸ್ತುತದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ಕಾರ್ಯಕ್ಕೆ ಎಲ್ಲ ತುಳು ಕನ್ನಡಿಗರು ಪ್ರೀತಿಯಿಂದ ಮುಕ್ತ ಮನಸ್ಸಿನಿಂದ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ. ಮುಂಬಯಿ ವಿ. ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್ ಉಪಾಧ್ಯರು, ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಶೆಟ್ಟಿ ಅವರು ಹಾಗೂ ಎಂ. ಎ. ಮತ್ತು ಸಂಶೋಧನ ವಿದ್ಯಾರ್ಥಿಗಳು ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿದ್ದು ತುಂಬ ಸಂತಸ ತಂದಿದೆ ಎಂದು ಅಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು ನುಡಿದರು.

ಹೊರನಾಡಿನಲ್ಲಿ ಕನ್ನಡ ಮನಸ್ಸುಗಳನ್ನು ಕಟ್ಟಿದ ಮತ್ತು ಸಾವಿರಾರು ಕಲಾವಿದರ ಬಾಳು ಬೆಳಗಿಸಿದ ಕರ್ನಾಟಕ ಸಂಘವು ನಮ್ಮ ಪಾಲಿಗೆ ದೇಗುಲವಾಗಿದ್ದು ಅದರ ನಿರ್ಮಾಣವೇ ನಮ್ಮ ಕನಸಾಗಿದೆ. ಇಂತಹ ಮಹಾನ್ ಸಂಸ್ಥೆಯ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯು ಒಂದು ಹಂತವನ್ನು ತಲುಪಿದ್ದು ನಮ್ಮಲ್ಲಿ ಒಂದಿಷ್ಟು ಸಮಾಧಾನವನ್ನು ತಂದಿದೆ. ಈ ಕಾರ್ಯ ಈ ಹಂತವನ್ನು ಮುಟ್ಟಲು ದೇವರ ದಯೆ ಮತ್ತು ಹೃದಯವಂತ ಮನಸ್ಸುಗಳು ನೀಡಿದ ದೇಣಿಗೆಯ ಸಹಾಯದಿಂದಲೇ ಸಾಧ್ಯವಾಗಿದೆ. ಇನ್ನುಳಿದ ಕಟ್ಟಡದ ಮೊದಲನೆಯ ಹಂತದ ಕಾಮಗಾರಿಯನ್ನು ಅದಷ್ಟು ಬೇಗ ಪೂರ್ಣಗೊಳಿಸಿ ಕಟ್ಟಡವನ್ನು ಲೋಕಾರ್ಪಣೆ ಗೊಳಿಸುವುದು ನಮ್ಮ ಧ್ಯೇಯವಾಗಿದೆ. ಈ ಸಂದರ್ಭದಲ್ಲಿ ಕಾಮಗಾರಿಯನ್ನು ವೀಕ್ಷಿಸಿದ *(ಪುಟ 8ಕ್ಕೆ)*

# ಅಂಗಡಿ ಮನೆ



(ಉಮಾ ರಾವ್ ಕಥೆಗಳು)

✍ ಉಮಾ ರಾವ್

ಮೊದಲಿಂದ ನಾವೆಲ್ಲಾ ಅವಳನ್ನು ಅಂಗಡಿ ಮನೆ ವಸಂತಾ ಎಂದೇ ಕರೆಯುತ್ತಿದ್ದೆವು. ಏಕೆಂದರೆ ಊರಿನ ಕಿಕ್ಕಿರಿದ ಅಂಗಡಿ ಬೀದಿಯಲ್ಲಿ, ಶಾಂತಲಾ ಟಾಕೀಸಿನಿಂದ ಮೂರು ಮನೆ ಬಿಟ್ಟು ಇದ್ದ ಅವರ ಮನೆ ಅಂಗಡಿಗೆ ಸೇರಿದಂತೆಯೇ ಇತ್ತು. ಹಾಗೆ ನೋಡಿದರೆ, ಮನೆ ಅಂಗಡಿಗೆ ಸೇರಿತ್ತೋ ಅಂಗಡಿ ಮನೆಗೆ ಸೇರಿತ್ತೋ ಹೇಳುವುದೂ ಕಷ್ಟವಾಗಿತ್ತು. ಅಂಗಡಿ ಬಳಸಿ ಹಿಂದೆ ಹೋದರೆ ತೋರಣ ಕಟ್ಟಿದ, ರಂಗೋಲಿ ಹಾಕಿದ ಮನೆ ಬಾಗಿಲು. ಅಂಗಡಿಗೂ ಮನೆಗೂ ನಡುವೆ ಇದ್ದ ಬಾಗಿಲು ಮಾತ್ರ ಯಾವಾಗಲೂ ತೆರೆದೇ ಇರುತ್ತಿತ್ತು.

"ವಸಂತಲಕ್ಷ್ಮಿ ಜನರಲ್ ಸ್ಟೋರ್ಸ್" ಎಂಬ ಫಲಕ ಹೊತ್ತ ಆ ಅಂಗಡಿಯಲ್ಲಿ ಎಲ್ಲಾ ವಯಸ್ಸಿನವರಿಗೂ ದಿನಗಟ್ಟಳೆ ಬೇಕಾಗುವ ಎಲ್ಲಾ ಪದಾರ್ಥಗಳೂ ಸಿಗುತ್ತಿದ್ದವು. ಹಾಗಾಗಿ ಸಿಂಬಳ ಸುರಿಸುವ ಮಕ್ಕಳನ್ನು ಕಂಕುಳಲ್ಲಿ ಹಾಕಿಕೊಂಡು ಪೆಪ್ಪರ್‌ಮಿಂಟಿಗಾಗಿ ಬರುವ ತಾಯಿಯರು, ನಶ್ಯದ ಚಟದ ಮುದುಕರು, ಪಾಸಿಂಗ್ ಶೋ ಸಿಗರೇಟ್ ಕೊಂಡು ಅಲ್ಲೇ ಸ್ಟೈಲಾಗಿ ಹಚ್ಚಿಕೊಳ್ಳುವ ಯುವಕರು, ಸೇಫ್ಟಿ ಪಿನ್ನುಗಳಿಗಾಗಿ ಪರದಾಡುವ ಹರೆಯದ ಹುಡುಗಿಯರು, ಬಾಟಲುಗಳಲ್ಲಿ ತುಂಬಿಟ್ಟ ಬಣ್ಣಬಣ್ಣದ ಗೋಲಿಗಳ ಮೇಲೆ ಕಣ್ಣಿಟ್ಟ ಚಡ್ಡಿ ಹುಡುಗರು, ದಿಢೀರನೆ ಮನೆಗೆ ಬಂದ ನೆಂಟರಿಗಾಗಿ ವೀಳ್ಯದೆಲೆ ಅಡಿಕೆ ತರಲು ಕಳಿಸಲ್ಪಟ್ಟ ಗಂಡಂದಿರು, ಎಣ್ಣೆಹಚ್ಚಿದ ತಲೆಗೂದಲು ಬಿರಿದುಕೊಂಡೇ ಸೀಗೇಕಾಯಿ ಗಾಗಿ ಓಡಿಬರುವ ಚೀಟಿಲಂಗದ ಹುಡುಗಿಯರು ಎಲ್ಲಾ ಇರುತ್ತಿದ್ದರು ಅಲ್ಲಿ.

ನಾವೆಲ್ಲಾ ಸ್ಕೂಲಿಗೆ ಹೋಗುವಾಗ ದಾರಿಯಲ್ಲಿ ನಿಂತು ವಸಂತಾನ್ನ ಕರೆಯಲು ಹೋದಾಗ, ಬೋಳುತಲೆ, ಸೋಡಾಗ್ಲಾಸ್ ಕನ್ನಡಕ, ಹುಬ್ಬಗಂಟಿನ ಅವರಪ್ಪ ಹಿಂದಕ್ಕೆ ಕೈಸನ್ನೆ ಮಾಡಿ "ಮನೆಗೆ ಹೋಗಿ" ಎನ್ನುತ್ತಿದ್ದರು. ಅಂಗಡಿ ಮನೆ ನಡುವಿನ ಬಾಗಿಲು ತೆಗೆದೇ ಇದ್ದರೂ, ಅದರ ಮೂಲಕ ವಸಂತಾ ಜೊತೆ ಮಾತಾಡುವ ಹಾಗಿರಲಿಲ್ಲ. ಅದರ ಮೂಲಕ ನಡೆದು ಅವರ ಮನೆಯೊಳಗೆ ಹೋಗುವ ಹಾಗೂ ಇರಲಿಲ್ಲ. ಯಾವಾಗಲಾದರೂ ಸಾಮಾನು ಸ್ಟಾಕ್ ಮುಗಿದಾಗ ಆತ 'ಲೇ, ನಂಜನಗೂಡ ಹಲ್ಪುಡಿ ತತಾ' ಎಂದು ಕೂಗಿ ಕೈ ಚಾಚುತ್ತಿದ್ದರು. ಅದರ ಬಾಗಿಲಲ್ಲಿ ಪೊಟ್ಟಣ ಕ್ಷಣದಲ್ಲಿ ಮೂಡುತ್ತಿತ್ತು ಅಥವಾ "ಹೂ ಬತ್ತಿ ತಂದು ಕೊಟ್ಟ ನಾಗಮ್ಮಾ" ಎಂದಾಗ "ಇಲ್ಲ ಇನ್ನೂ" ಎಂಬ ಸಣ್ಣ ಧ್ವನಿ ಕೇಳುತ್ತಿತ್ತು.

ಗುಂಗುರು ಕೂದಲು ಕಪ್ಪುಕಣ್ಣಿನ, ಪಟಪಟ ಮಾತಾಡುವ. ಕ್ಲಾಸಿನಲ್ಲಿ ಟೀಚರ್ ಕಣ್ತಪ್ಪಿಸಿ ದಾರದಾಟ ಆಡುವ, ಯಾವಾಗಲೂ ಗಣಿತದಲ್ಲಿ ಫೇಲಾಗುವ ಹುಡುಗಿ ವಸಂತಾ ಇದ್ದಕ್ಕಿದ್ದಂತೆ ಬದಲಾಗತೊಡಗಿದಳು. ನಮಗೆ ಅಚ್ಚರಿಯಾಗುವಂತೆ, ನಮ್ಮೆಲ್ಲರಿಗಿಂತಾ ಆರಿಂಚು ಎತ್ತರ ಬೆಳೆದುಬಿಟ್ಟಳು. ಅವಳ ನಡಿಗೆಯಲ್ಲಿ ಮೂಡಿದ ಧಿಮಾಕು. ಕಣ್ಣಿನ ಹೊಸ ಹೊಳಪು ಎದುರಾಗುವ ಕಾಲೇಜು ಹುಡುಗರು ಅವಳನ್ನೇ ದಿಟ್ಟಿಸುವಂತೆ ಮಾಡಿ, ಕೋಲು ಕೋಲಾಗಿದ್ದ ನಮ್ಮೆಲ್ಲರಲ್ಲಿ ಕೀಳರಿಮೆ ಹುಟ್ಟಿಸಿದವು. ಒಂದು ದಿನ ಇದ್ದಕ್ಕಿದ್ದಂತೆ ವಸಂತಾ ಸ್ಕೂಲಿಗೆ ಬರಲಿಲ್ಲ. ಕರೆಯಲು ಹೋದಾಗ ಅವರಮ್ಮ "ಅವಳು ಇನ್ನೊಂದು ವಾರ ಸ್ಕೂಲಿಗೆ ಬರೊಲ್ಲ. ಬುಧವಾರ ಸಂಜೆ ಅವಳಿಗೆ ಆರತಿ. ನೀವೆಲ್ಲಾ ಖಂಡಿತಾ ಬನ್ನಿ" ಎಂದರು. ತಿಳಿದೂ ತಿಳಿಯದಂತೆ ನಟಿಸುತ್ತಾ ಭಯಮಿಶ್ರಿತ ಸಂಕೋಚದಿಂದ ಹೂಂಗುಟ್ಟಿ ನಾವೆಲ್ಲಾ ಅಲ್ಲಿಂದ ನಡೆದಿದ್ದೆವು.

ಅಂದು ಸಂಜೆ ಹೋದಾಗ, ಅವರ ಮನೆ ಮುಂದೆ ಚಪ್ಪರ, ಹಸಿರುತೋರಣ, ರಂಗೋಲಿ. ಬಾಗಿಲಲ್ಲೇ ಕುಳಿತು ನಗುಮೋಮು ಊದುತ್ತಿದ್ದ ಓಲಗದವರು. ದೀಪ, ಧೂಪ, ಹಣ್ಣು, ಹೂಗಳ ನಡುವೆ ರೇಷ್ಮೆ ಸೀರೆ ಹೊದಿಸಿದ್ದ ಕರಿಮರದ ಕುರ್ಚಿ. ಅದರ ಮೇಲೆ ಭಾರಿ ಜರಿಸೀರೆ ಉಟ್ಟು, ಮೈತುಂಬಾ ಒಡವೆ ಹೇರಿಕೊಂಡು, ಮುದುರಿ ಕೂತ ವಸಂತಾ. ಅವರು ಕೊಟ್ಟ ಪಾನಕ ಕುಡಿದು, ಬಾಗಿನ ಹೊತ್ತು ಅವಳ ಮನೆಯಿಂದ ಹೊರಗೆ ನಡೆದಾಗ ನಾವು ಗಮನಿಸಿದ್ದು, ಮೊದಲ ಬಾರಿಗೆ ಅವರ ಅಂಗಡಿ–ಮನೆ ನಡುವೆ ಇದ್ದ ಬಾಗಿಲು ಮುಚ್ಚಿತ್ತು. ಮತ್ತೆ ಅದು ತೆರೆದಿದ್ದು ಅವಳ ಮದುವೆಯ ದಿನವೇ.

ಮದುವೆಯಾಗಿ ಮುಂಬೈ ಸೇರಿದ ನನಗೆ ಮತ್ತೆ ಆ ಊರಿಗೆ ಹೋಗುವ ಪ್ರಸಂಗ ಬಂದದ್ದು ಮೂವತ್ತು ವರ್ಷಗಳ ನಂತರ. ದಿನಾ ಸ್ಕೂಲಿಗೆ ನಡೆದುಹೋಗುತ್ತಿದ್ದ ಅಂಗಡಿ ಬೀದಿ ಈಗ ಗುರುತು ಸಿಗುವ ಹಾಗೂ ಇರಲಿಲ್ಲ. ಎಲ್ಲಾ ಬದಲಾಗಿತ್ತು. ಹಾಗೇ ಉಳಿದದ್ದು ಶಾಂತಲಾ ಟಾಕೀಸ್ ಮಾತ್ರ. ಅಲ್ಲಿಂದ ಮೂರು ಮನೆ ಎಣಿಸಿ ನಡೆದಾಗ ಸಿಕ್ಕದ್ದು "ವಸಂತ್ಸ್" ಅಂಗಡಿ ಮನೆಯಿದ್ದ ಸ್ಥಳದಲ್ಲಿ ನಿಂತಿದ್ದ ಭರ್ಜರಿ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್. ಅನುಮಾನಿಸುತ್ತಲೇ ಹಿಂಭಾಗದಲ್ಲಿದ್ದ ಮನೆ ಕಡೆ ಹೆಜ್ಜೆ ಹಾಕಿದಾಗ ಕಂಡದ್ದು ಕಬ್ಬಿಣದ ಬಾಗಿಲಿನ ಗೋಡೌನ್.

ಹಿಂದೆ ಚಿಗುರು ಮೀಸೆಯ ಹುಡುಗನಾಗಿದ್ದ ವಸಂತಾಳ ಅಣ್ಣ, ಹೊಳೆಯುವ ಗಾಜಿನ ಬೀರುಗಳ ನಡುವೆ ಕೌಂಟರಿನಲ್ಲಿ ಕೂತಿದ್ದ. ವಸಂತಾಳ ಪಡಿಯಚ್ಚಾಗಿದ್ದರಿಂದ ಗುರುತು ಸಿಗುವುದು ಸಾಧ್ಯವಾಯಿತು. ಮಾತಾಡಿಸಿದಾಗ ನಗದೇ ಗುರುತು ಸಿಗಲಿಲ್ಲ ಎಂದ. "ನಮ್ತಂದೆ ತೀರಿಕೊಂಡ ಮೇಲೆ ಅಂಗ್ಡಿ ರಿನೋವೇಟ್ ಮಾಡ್ಸಿದ್ದು. ಎಕ್ಸ್‌ಟೆನ್ಷನ್‌ನಲ್ಲಿ ಬಂಗ್ಲೆ ಕಟ್ಕೊಂಡು ಮನೆ ಅಲ್ಲಿಗೇ ಶಿಫ್ಟ್ ಮಾಡಿದ್ದು" ಎಂದ. ನಾನು "ವಸಂತಾ" ಎನ್ನುತ್ತಿದ್ದಂತೆಯೇ "ತೀರ್ಕೊಂಡ್ಲು" ಎಂದ.

## ಗುದ್ದು

ಎಲ್ಲರಂತಲ್ಲ ನಂದೂ ದೊಡ್ಡಪ್ಪ, ವಿಚಿತ್ರ. ಯಾವಾಗೂ ಬಿಳಿ ಬಟ್ಟೆ ಹಾಕೋನು. ಬಿಳೀ ಕಾಟನ್ ಶರಟು, ಬಿಳಿ ಪ್ಯಾಂಟು. ದೊಡ್ಡ ಹೊಟ್ಟೆಯ ಮೇಲೆ ಕಪ್ಪು ಬೆಲ್ಟು, ಕರೀ ಚಪ್ಪಲಿ. ಕಾಟನ್ ಪೇಟೆಯ ಗಲ್ಲಿಯೊಂದರ ಮಹಡಿ ಮೇಲಿದ್ದ ಸಣ್ಣ ಮನೇಲಿ ಅವನು ಒಬ್ಬನೇ ಇದ್ದ. ಯಾರೂ ಅವನ ಮನೆ ನೋಡಿರಲಿಲ್ಲ. ಕಂಪನಿಯೊಂದರಲ್ಲಿ ಅಕೌಂಟೆಂಟ್ ಕೆಲಸ. ಬೆಳಗೆ ಎಂಟು ಗಂಟೆಗೆ ಸೈಕಲ್ ಹತ್ತಿ ಪ್ರಕಾಶ್ ಕೆಫೆಗೆ ಹೋಗಿ ಎರಡು ಕೇಸರಿಭಾತ್, ಎರಡು ಪ್ಲೇಟ್ ಇಡ್ಲಿ ಹೊಡೆದು ಕೆಲಸಕ್ಕೆ ಹೋದನೆಂದರೆ ಮನೆ ಸೇರುತ್ತಿದ್ದುದು ರಾತ್ರೀನೇ. ಹೌದು, ಅವನಿಗೆ ಎಲ್ಲಿ ಹೋಗಬೇಕಾದರೂ ಸೈಕಲ್ಲೇ ಆಗಬೇಕು.

ಪ್ರತಿ ಭಾನುವಾರ, ಹಬ್ಬದ ರಜಾದಿನಗಳು ಬೆಳಗಾಗೆದ್ದು ನಮ್ಮ ಮನೆಗೆ ಬಂದ್ಬಿಡೋನು. ಜೊತೆಯಲ್ಲಿ ಒಂದು ಪುಟ್ಟ ಚೀಲದಲ್ಲಿ ರಾಮಮೂರ್ತಿಯವರದೋ, ನರಸಿಂಹಯ್ಯನವರದೋ ಒಂದು ಪತ್ತೇದಾರಿ ಕಾದಂಬರಿ ತರೋನು. ಮಧ್ಯಾಹ್ನ ಎಲ್ಲಾ ಕೂತು ಅಲ್ಲಿನ ಕಥೆ ಹೇಳೋನು. ನಾವೆಲ್ಲಾ "ಬಿಯರ್

ಹೇಗಿರುತ್ತೆ" ಎಂದು ಕೇಳಿದ್ರೆ ಅವೆಲ್ಲಾ ಬರೀ ಪೊಲೀಸರು, ಕಳ್ಳರು ಕುಡಿಯೋದು, ನಿಮಗಲ್ಲ ಅನ್ನೋನು. ಏನೇನೋ ಜೋಕು ಹೇಳಿ ತುಂಬಾ ನಗಿಸೋನು ಆದರೆ ಅವನೆದುರಿಗೆ ಮದುವೆ ವಿಷಯ ಎತ್ತೋ ಹಾಗೇ ಇರಲಿಲ್ಲ. ಇದರ ಬಗ್ಗೆ ಅಜ್ಜಿ ನಮಗೆ ಎಚ್ಚರಿಸುತ್ತಾನೇ ಇರ್ತಿದ್ರು.

ಅವನಿಲ್ಲದಾಗ ಅಮ್ಮ, ಅಜ್ಜಿ ಎಲ್ಲಾ ಅವನು ತುಂಬಾ ಜಿಪುಣ ಅನ್ನುತ್ತಿದ್ದರು. ಒಬ್ಬೇ ಇದಾನೆ, ಅಷ್ಟು ದುಡ್ಡು ಮಾಡಿದಾನೆ. ಏನದು ಮಾಡ್ಕೋತಾನೋ. ಪ್ರತಿ ವಾರ ಬರ್ತಾನೆ. ಮಕ್ಕಳ ಕೈಗೆ ಒಂದು ಚಾಕೋಲೇಟು ಇಡೊಲ್ಲ ಅಂತಿದ್ರು.

ಒಂದು ಸಲ ಅಜ್ಜಿ ಅತ್ತಿದ್ದು. ಅವನು ಬಂದಾಗ "ನಿಜ ಏನೋ" ಎಂದು ಬಿಕ್ಕಿದರು. ಅವನು ರೇಗಿ, ತಕ್ಷಣ ಸೈಕಲ್ ಹತ್ತಿ ಮನೆಗೆ ಹೊರಟು ಬಿಟ್ಟಿದ್ದ. ಮುಂದಿನ ಭಾನುವಾರ ಏನೂ ಆಗದಂತೆ ಅವನು ಬಂದಾಗ ಮನೆಯವರು ಏನೂ ಆಗದಂತೆ ಇದ್ದು ಬಿಟ್ಟಿದ್ದರು.

ಮದುವೆಯಾಗಿ ಅಮೆರಿಕಾಗೆ ಬಂದ ಮೇಲೆ ನಂದೂ ದೊಡ್ಡಪ್ಪ ನನ್ನ ಮನಸ್ಸಿನಿಂದ ನಿಧಾನವಾಗಿ ಜಾರಿ ಹೋಗಿದ್ದ. ಆದ್ರೆ ಅವತ್ತು ನಾನು ಊರಿಗೆ ಹೊರಡುವ ಹಿಂದಿನ ದಿನ, ಔತಣಕ್ಕೆ ಅವನು ಬಂದಿದ್ದು ಚೆನ್ನಾಗಿ ನೆನಪಿದೆ.

ಅವನು ಬರುವುದು ತಡವಾಗಿತ್ತು. ಎಲ್ಲರೂ ಕಾಯುತ್ತಿದ್ದರು. ಬಂದಿಳಿದಾಗ ಏದುರುಸಿರು ಬಿಡುತ್ತಿದ್ದ. "ಏನಾಯ್ತೋ" ಎಂದಾಗ ಮೊದಲು ನೀರು ಕೇಳಿ ಕುಡಿದ. "ದಾರೀಲಿ ಬರ್ತಾ ಇದೆ. ನಮ್ಮ ಮನೆ ಸರ್ಕಲ್ ಹತ್ತಿರ ಏನೋ ದೊಡ್ಡ ಜಗಳ ನಡೀತಿತ್ತು. ಮಾರಾಮಾರಿ, ತುಂಬಾ ಜನ ಸೇರಿದ್ದರು. ನಾನು ಇಳಿದು ಅವರಿಗೆ ಎರಡು ಗುದ್ದು ಇವರಿಗೆ ಎರಡು ಗುದ್ದು ಹಾಕಿ ಸೈಕಲ್ ಹತ್ತಿಕೊಂಡು ಬಂದುಬಿಟ್ಟೆ" ಎಂದು ಬಿದ್ದು ಬಿದ್ದು ನಗತೊಡಗಿದ್ದ.

ಇವತ್ತು ಬೆಳಗ್ಗೆ ಅಮ್ಮ ಫೋನ್ ಮಾಡಿ ನಂದೂ ದೊಡ್ಡಪ್ಪ ಹೋಗಿಬಿಟ್ಟ ಅಂದ್ಲು. ಒಬ್ಬನೇ ಇದ್ನಂತೆ. ರಾತ್ರಿ ನಿದ್ದೇಲಿ. ಅದೇ ಮನೆಯಲ್ಲಂತೆ. ಆ ಸೈಕಲ್ ಬಿಟ್ಟು ಅವನ ಹತ್ತಿರ ಏನೂ ಇರಲಿಲ್ಲ ನೋಡು ಎಂದಳು. ●

## ಮಾತುಂಗ ಕರ್ನಾಟಕ ಸಂಘದ ಆವರಣಕ್ಕೆ....

ಇನ್ನಷ್ಟು ಜನರು ನಮ್ಮೊಂದಿಗೆ ಕೈ ಜೋಡಿಸುವ ಭರವಸೆಯನ್ನು ನೀಡಿದ್ದು, ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಇಂದು ಸಂಘದ ಮೇಲಿನ ಪ್ರೀತಿ, ಅಭಿಮಾನದಿಂದ ತಾವೆಲ್ಲರು ಬಂದು ಕಾಮಗಾರಿಯನ್ನು ಕಣ್ಣಾರೆ ವೀಕ್ಷಿಸಿದ್ದು, ನಮಗೆ ಸಂತೋಷ ತಂದಿದೆ. ಸಹೃದಯರಾದ ತಮಗೆಲ್ಲರಿಗೂ ಕರ್ನಾಟಕ ಸಂಘದ ವತಿಯಿಂದ ವಂದನೆಗಳನ್ನು ಅರ್ಪಿಸುತ್ತೇನೆ ಎಂದು ಕರ್ನಾಟಕ ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಹೇಳಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಮಾತನಾಡುತ್ತಾ, ಕರ್ನಾಟಕ ಸಂಘ ಸದಾ ಒಂದಲ್ಲ ಒಂದು ಚಟುವಟಿಕೆಗಳಿಂದ ಕೂಡಿದ್ದ ಸಂಸ್ಥೆ. ಮಹಾನಗರದಲ್ಲಿ ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿಯನ್ನು ಜೀವಂತವಾಗಿರಿಸಿ ಸದಾ ಕ್ರಿಯಾಶೀಲವಾಗಿದ್ದ ಈ ಸಂಘವು ಪ್ರಸ್ತುತ ಕಟ್ಟಡ ಪುನರ್ನಿರ್ಮಾಣಗೊಳ್ಳುತ್ತಿದ್ದು, ಆಧುನಿಕ ಸ್ಪರ್ಶದೊಂದಿಗೆ ಸಜ್ಜಾಗುತ್ತಿರುವುದನ್ನು ನೋಡಿ ಸಂತೋಷವಾಗಿದೆ. ಮಾತುಂಗಾ ಕರ್ನಾಟಕ ಸಂಘದ ಈ ಮಹತ್ವಾಕಾಂಕ್ಷೆಯ ಯೋಜನೆಯು ಪೂರ್ಣಗೊಳ್ಳಲು ಸಮಾಜದ ಪ್ರತಿಯೊಬ್ಬ ಕನ್ನಡಿಗರ ಬೆಂಬಲ ಅಗತ್ಯ ಎಂದು ನುಡಿದರು.

ವಿಭಾಗದ ಸಂಶೋಧನ ವಿದ್ಯಾರ್ಥಿ ಅನಿತಾ ಪೂಜಾರಿ ತಾಕೋಡೆ ಅವರು ಮಾತನಾಡಿ ಮಾಟುಂಗ ಕರ್ನಾಟಕ ಸಂಘ ಮುಂಬಯಿಯಲ್ಲಿ ನೆಲೆಸಿರುವ ತುಳು ಕನ್ನಡಿಗರಿಗೆ ತವರೂರಿನ ಪ್ರೀತಿಯನ್ನು ಉಣಿಸುತ್ತಿತ್ತು. ನಿತ್ಯನಿರಂತರವಾಗಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವ ಸುಸಂಸ್ಕೃತ ತಾಣ ಇದಾಗಿತ್ತು. ಸದಾ ಬಾಗಿಲನ್ನು ತೆರೆದಿಟ್ಟು ಎಲ್ಲರನ್ನೂ ಆದರದಿಂದ ಸ್ವಾಗತಿಸುತ್ತಿದ್ದ ಈ ಸಂಘದಲ್ಲಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಂಡು ಸಂಭ್ರಮಿಸುವವರನ್ನು ನೋಡುವುದರಲ್ಲಿ ಒಂದು ರೀತಿಯ ಚಂದವಿತ್ತು. ನನ್ನ ಚೊಚ್ಚಲ ಕವನ ಸಂಕಲನ "ಕಾಯುತ್ತ ಕವಿತೆ" ಇದೇ ಮಾಟುಂಗ ಕರ್ನಾಟಕ ಸಂಘದಲ್ಲಿ ಅದ್ದೂರಿಯಿಂದ ಬಿಡುಗಡೆಗೊಂಡಿತ್ತು. ಬಿಡುಗಡೆಯ ಎಲ್ಲಾ ಜವಾಬ್ದಾರಿಯನ್ನು ಸಂಘವೇ ವಹಿಸಿಕೊಂಡಿತ್ತು. ಅದೆಷ್ಟೋ ಮಂದಿಯ ಪ್ರತಿಭೆಗಳು ಅರಳಿದ್ದು, ಕೃತಿಗಳು ಬೆಳಕು ಕಂಡಿದ್ದು, ವೇದಿಕೆಗಳು ಒದಗಿ ಬಂದಿದ್ದು, ಯಶಸ್ಸಿನ ಶಿಖರವೇರುವಲ್ಲಿ ಮೊದಲ ಮೆಟ್ಟಿಲಾಗಿದ್ದು ಮಾಟುಂಗ ಕರ್ನಾಟಕ ಸಂಘ. ಕೆಲವು ವರ್ಷಗಳಿಂದ ಈ ಸಂಘದ ನವನಿರ್ಮಾಣದ ಕಾರ್ಯ ನಡೆಯುತ್ತಿದೆ. ಇನ್ನು ಕೆಲವೇ ತಿಂಗಳಲ್ಲಿ ಹೊಸರೂಪಿನಲ್ಲಿ ನಮ್ಮೆದುರು ಕಂಗೊಳಿಸಲಿದೆ. ಹಳೆಯ ಅವಿಸ್ಮರಣೀಯ ನೆನಪುಗಳು ತಾಜಾತನಗೊಳ್ಳುವ ಹುಮ್ಮಸ್ಸಿನಲ್ಲಿದೆ. ಸಂಘದಲ್ಲಿ ಮತ್ತೆ ಮೊದಲಿನಂತೆ ಕನ್ನಡದ ಕಂಪು ಮೇಳೈಸಬೇಕು, ಇದಕ್ಕಾಗಿ ನಾವೆಲ್ಲರೂ ಜೊತೆಯಾಗೋಣ ವಿಶಾಲ ಮನೋಭಾವದಿಂದ ಸಹಕರಿಸೋಣ ಎಂದು ಸಂಘದೊಂದಿಗಿನ ತಮ್ಮ ಒಡನಾಟವನ್ನು ನೆನಪಿಸಿಕೊಂಡರು.

ವಿಭಾಗದ ಇನ್ನೋರ್ವ ಸಂಶೋಧನ ವಿದ್ಯಾರ್ಥಿ ಸುರೇಖಾ ಶೆಟ್ಟಿ ಅವರು ಮಾತನಾಡಿ ಮಾಟುಂಗ ಕರ್ನಾಟಕ ಸಂಘದ ಬಗೆಗೆ ನಾನು ಮುಂಬೈ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಜನೆಗಾಗಿ ಬಂದ ಮೇಲೆ ತಿಳಿದುಕೊಂಡೆ. ಆ ಸಮಯದಲ್ಲಿ ಕನ್ನಡ ವಿಭಾಗದ ವಿದ್ಯಾರ್ಥಿಗಳಿಗೆ ಈ ಸಂಘದ ಮೂಲಕ ಪ್ರೋತ್ಸಾಹ ಸಿಗುತ್ತಿತ್ತು. ಈಗ ಸಂಘದ ನವನಿರ್ಮಾಣ ಕಾರ್ಯದಲ್ಲಿ ನಾವೆಲ್ಲರೂ ಜೊತೆಯಾಗಿ ಸಹಕರಿಸೋಣ ಎಂದು ತಮ್ಮ ಮನದ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಸುಶೀಲಾ ದೇವಾಡಿಗ ಅವರು ಸಂಘದ ಹೆಜ್ಜೆ ಹಾದಿಯನ್ನು ವಿವರಿಸಿದರು. ಕರ್ನಾಟಕ ಸಂಘದ ಸಾಧನೆಯನ್ನು ಕೃತಿ ರೂಪದಲ್ಲಿ ತರುವ ಪ್ರಯತ್ನ ನಡೆಸಿರುವುದಾಗಿ ಸಭೆಗೆ ತಿಳಿಸಿದರು. ●

## ಕಾಮನ ಹಬ್ಬ....

ಸಮಾನರಾಗಿ ಕಾಣುತ್ತಾರೆ. ಹಬ್ಬದ ಅಡುಗೆಯೂ ಅಷ್ಟೇ ರುಚಿಕರವಾಗಿರುತ್ತದೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಲ್ಲದ ಹೋಳಿಗೆಯನ್ನು ತಯಾರಿಸಿದರೆ, ಉತ್ತರ ಭಾರತದಲ್ಲಿ ಗುಜಿಯಾ, ಮಾಲ್ಪುವಾ ಮತ್ತು ಥಂಡೈ ಎನ್ನುವ ವಿಶೇಷ ಪಾನೀಯಗಳನ್ನು ತಯಾರಿಸಲಾಗುತ್ತದೆ. ಕುಟುಂಬದವರೆಲ್ಲರೂ ಒಟ್ಟಾಗಿ ಕುಳಿತು ಈ ತಿನಿಸುಗಳನ್ನು ಸವಿಯುವುದು ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸುತ್ತದೆ.

ಆದರೆ, ಈ ಸುಂದರ ಹಬ್ಬವನ್ನು ಆಚರಿಸುವಾಗ ನಾವು ಪರಿಸರದ ಬಗ್ಗೆಯೂ ಜಾಗರೂಕರಾಗಿರಬೇಕು. ಇತ್ತೀಚಿನ ದಿನಗಳಲ್ಲಿ ರಾಸಾಯನಿಕಯುಕ್ತ ಬಣ್ಣಗಳ ಬಳಕೆಯಿಂದ ಚರ್ಮದ ಕಾಯಿಲೆಗಳು ಮತ್ತು ಕಣ್ಣಿನ ತೊಂದರೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ನೈಸರ್ಗಿಕವಾಗಿ ಸಿಗುವ ಅರಿಶಿನ, ಬೀಟ್‌ರೂಟ್ ಅಥವಾ ಹೂವುಗಳಿಂದ ತಯಾರಿಸಿದ ಪರಿಸರ ಸ್ನೇಹಿ ಬಣ್ಣಗಳನ್ನು ಬಳಸುವುದು ಶ್ರೇಯಸ್ಕರ. ನೀರಿನ ಉಳಿತಾಯದ ಬಗ್ಗೆಯೂ ನಾವು ಗಮನ ಹರಿಸಬೇಕು. ಹಬ್ಬವು ಪ್ರಕೃತಿಯನ್ನು ಸಂರಕ್ಷಿಸುವ ಮತ್ತು ಮನುಷ್ಯರ ನಡುವೆ ಪ್ರೀತಿಯನ್ನು ಬೆಸೆಯುವ ಮಾಧ್ಯಮವಾಗಬೇಕೇ ಹೊರತು ಯಾರಿಗೂ ತೊಂದರೆ ಕೊಡುವಂತಿರಬಾರದು. ಹೀಗೆ ಸಂಪ್ರದಾಯ ಮತ್ತು ಜವಾಬ್ದಾರಿಯ ನಡುವೆ ಆಚರಿಸುವ ಹೋಳಿ ಹಬ್ಬವು ನಿಜಕ್ಕೂ ಜೀವನಕ್ಕೆ ಹೊಸ ಚೈತನ್ಯ ನೀಡುವ ಉತ್ಸವವಾಗಿದೆ. ●

# ಮುಂಬೈನ ಮೈಸೂರು ಅಸೋಸಿಯೇಷನ್‌ನಲ್ಲಿ 'ಶ್ರೀರಂಗ ಸ್ಮರಣೆ' ನಾಟಕೋತ್ಸವ





ಶತಮಾನೋತ್ಸವದ ಸಂಭ್ರಮದಲ್ಲಿರುವ ಮುಂಬೈನ ಪ್ರತಿಷ್ಠಿತ ಮೈಸೂರು ಅಸೋಸಿಯೇಷನ್, ಕನ್ನಡದ ಧೀಮಂತ ನಾಟಕಕಾರ ಶ್ರೀರಂಗರ ನೆನಪಿನಲ್ಲಿ ಆಯೋಜಿಸಿರುವ ಮೂರು ದಿನಗಳ (ಫೆಬ್ರವರಿ 27, 28 ಮತ್ತು ಮಾರ್ಚ್ 1) 'ಶ್ರೀರಂಗ ಸ್ಮರಣೆ' ನಾಟಕೋತ್ಸವಕ್ಕೆ ಶುಕ್ರವಾರ ಅದ್ದೂರಿ ಚಾಲನೆ ದೊರೆಯಿತು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಶ್ರೀಮತಿ ಉಷಾ ದೇಸಾಯಿ ಮತ್ತು ಪರಿವಾರದ ಸಹಯೋಗದೊಂದಿಗೆ ಈ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವು ವೀರಗಾಸೆ ನೃತ್ಯದ ಅದ್ದೂರಿ ಮೆರುಗಿನೊಂದಿಗೆ ಆರಂಭವಾಯಿತು. ಇದೇ ಸಂದರ್ಭದಲ್ಲಿ ಅಸೋಸಿಯೇಷನ್‌ನ ಮೊದಲ ಮಹಡಿಯಲ್ಲಿ ಕಳೆದ ನೂರು ವರ್ಷಗಳಲ್ಲಿ ಮೈಸೂರು ಅಸೋಸಿಯೇಷನ್‌ನಲ್ಲಿ ನಡೆದ ಶ್ರೀರಂಗರ ನಾಟಕಗಳ ಹಾಗೂ ಸಂಸ್ಥೆಯ ಸದಸ್ಯರು ನಿರ್ಮಿಸಿ ನಟಿಸಿದ ನಾಟಕಗಳ ಅಪರೂಪದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಡಾ. ಕೆ. ವಿ. ನಾಗರಾಜ ಮೂರ್ತಿ ಅವರು, "ಹಲವಾರು ಭಾಷೆಗಳ ನಡುವೆ ಕನ್ನಡವನ್ನು ಉಳಿಸಿ ಬೆಳೆಸುತ್ತಿರುವ ಮೈಸೂರು ಅಸೋಸಿಯೇಷನ್‌ನ ಕಾರ್ಯ ಶ್ಲಾಘನೀಯ. ನೂರು ವರ್ಷ ದಾಟಿ 101ನೇ ವರ್ಷಕ್ಕೆ ಕಾಲಿಟ್ಟ ಮೊದಲ ದಿನವೇ ಶ್ರೀರಂಗರ ನಾಟಕೋತ್ಸವ ಮಾಡುತ್ತಿರುವುದು ಹೆಮ್ಮೆಯ ವಿಷಯ.

ಸೃಜನಶೀಲತೆಯಿಂದ ಕೆಲಸ ಮಾಡುತ್ತಿರುವ ಈ ಸಂಸ್ಥೆಯ ಪದಾಧಿಕಾರಿಗಳಿಗೆ ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ," ಎಂದು ನುಡಿದರು. ಅಸೋಸಿಯೇಷನ್ ಟ್ರಸ್ಟಿ ಡಾ. ಬಿ. ಆರ್. ಮಂಜುನಾಥ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯು ಶತಮಾನ ಪೂರೈಸಿದ ಸಂಭ್ರಮವನ್ನು ಹಂಚಿಕೊಂಡರು. ಮರಾಠಿ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಯೋಗಿಸುವ ಮೂಲಕ ಭಾಷೆ ಮತ್ತು ಸಂಸ್ಕೃತಿಗೆ ಒತ್ತು ನೀಡುತ್ತಾ ಬಂದಿರುವುದನ್ನು ಸ್ಮರಿಸಿದ ಅವರು, ಹಣಕಾಸಿನ ತೊಂದರೆಯ ನಡುವೆಯೂ ಹೊರನಾಡಿನಲ್ಲಿ ನಾಟಕ ತಂಡಗಳಿಗೆ ಸಹಕಾರ ನೀಡುತ್ತಿರುವ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.





ಶ್ರೀರಂಗರ ಪುತ್ರಿ ಶ್ರೀಮತಿ ಉಷಾ ದೇಸಾಯಿ ಅವರು ದೀಪ ಬೆಳಗಿಸಿ ನಾಟಕೋತ್ಸವಕ್ಕೆ ಶುಭ ಹಾರೈಸುತ್ತಾ, ತಮ್ಮ ತಂದೆಯವರ ರಂಗಭೂಮಿ ಕೊಡುಗೆಯನ್ನು ಸ್ಮರಿಸಿದರು. ಸಭಾ ಕಾರ್ಯಕ್ರಮದ ಬಳಿಕ ಪಿ. ಲಂಕೇಶ್ ಅನುವಾದಿತ, ಶಶಿಧರ್ ಭಾರಿಘಾಟ್ ನಿರ್ದೇಶನದ ವಿಶ್ವಪ್ರಸಿದ್ಧ ಗ್ರೀಕ್ ರುದ್ರನಾಟಕ 'ದೊರೆ ಈಡಿಪಸ್' ಪ್ರದರ್ಶನಗೊಂಡಿತು. ವಿಧಿಯ ಆಟದ ಮುಂದೆ ಮನುಷ್ಯನ ಅಸಹಾಯಕತೆಯನ್ನು ಬಿಂಬಿಸುವ ಈ ನಾಟಕವು ಪ್ರೇಕ್ಷಕರ ಮನ ಮುಟ್ಟುವಲ್ಲಿ ಯಶಸ್ವಿಯಾಯಿತು. ವೇದಿಕೆಯಲ್ಲಿ ಪ್ರೊ. ಬನ್ನಟ್ಟಿ



ಉಪಸ್ಥಿತರಿದ್ದರು ಹಾಗೂ ಅಸೋಸಿಯೇಷನ್ ಜೊತೆ ಕಾರ್ಯದರ್ಶಿ ನಾರಾಯಣ ನವಿಲೇಕರ್ ಕಾರ್ಯಕ್ರಮ ನಿರೂಪಿಸಿದರು.

ಎರಡನೆಯ ದಿನದ ನಾಟಕ 'ಕಾಲಜ್ಞಾನಿ ಕನಕ' : ಶ್ರೀರಂಗ ರಂಗೋತ್ಸವದ ಎರಡನೇ ದಿನದಂದು 'ಅಭಿನಯ ರಂಗ' ತಂಡದ ವತಿಯಿಂದ 'ಕಾಲಜ್ಞಾನಿ ಕನಕ' ನಾಟಕವು ಅತ್ಯಂತ ಯಶಸ್ವಿಯಾಗಿ ಪ್ರದರ್ಶನ ಗೊಂಡಿತು. ಪ್ರೊ. ಕಿ.ರಂ. ನಾಗರಾಜ ಅವರು ರಚಿಸಿದ ಈ ಕೃತಿಯನ್ನು ಹಿಂದೆ ಹಿರಿಯ ರಂಗಕರ್ಮಿ ಸಿ.ಜಿ. ಕೃಷ್ಣಸ್ವಾಮಿ (ಸಿಜಿಕೆ) ಅವರು ನಿರ್ದೇಶಿಸಿದ್ದರು. ಇದೀಗ ಟಿ. ರಘು ಅವರ ಮರು ನಿರ್ದೇಶನದಲ್ಲಿ ಈ ನಾಟಕವು ಹೊಸ ಮೆರುಗಿನೊಂದಿಗೆ ರಂಗದ ಮೇಲೆ ಅನಾವರಣಗೊಂಡಿದೆ.




ಯುದ್ಧದ ಭೀಕರತೆ ಮತ್ತು ರಕ್ತಪಾತವನ್ನು ಕಂಡು ಮನನೊಂದು ಶಸ್ತ್ರತ್ಯಾಗ ಮಾಡುವ ಒಬ್ಬ ಸೈನಿಕ, ಸಮಾಜದ ಅಂಕುಡೊಂಕುಗಳನ್ನು ತಿದ್ದುವ 'ದಾಸ'ನಾಗಿ ಬದಲಾಗುವ ಕಥಾಹಂದರ ಈ ನಾಟಕದ್ದಾಗಿದೆ. ಇಲ್ಲಿ ಕೇವಲ ಭಕ್ತಿಯನ್ನಷ್ಟೇ ಚಿತ್ರಿಸದೆ, ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ರಾಜಕೀಯ ಕುತಂತ್ರ ಮತ್ತು ಮನುಷ್ಯನ ಅಹಂಕಾರದ ವಿರುದ್ಧ ಕನಕದಾಸರು ಸಿಡಿದೆದ್ದ ವೈಚಾರಿಕ ಹಾದಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡಲಾಗಿದೆ. ಹೊಸ ರೀತಿಯ ಭಾಷೆ ಮತ್ತು ಸಂಕೇತಗಳ ಮೂಲಕ ಕನಕನ ವ್ಯಕ್ತಿತ್ವವನ್ನು ಇಂದಿನ ಕಾಲಕ್ಕೂ ಪ್ರಸ್ತುತವಾಗುವಂತೆ ರೂಪಿಸಲಾಗಿದ್ದು, ಕಲಾವಿದರ ಜೀವಂತಿಕೆ ತುಂಬಿದ ನಟನೆಯಿಂದಾಗಿ ಕನಕದಾಸರ ಜೀವನ ದರ್ಶನ ಪ್ರೇಕ್ಷಕರ ಮನ ಮುಟ್ಟುವಲ್ಲಿ ಯಶಸ್ವಿಯಾಯಿತು. ನಾಟಕೋತ್ಸವದ ಸಮಾರೋಪದ ದಿನದ ಕಾರ್ಯಕ್ರಮಗಳು ಅತ್ಯಂತ ಅರ್ಥಪೂರ್ಣವಾಗಿ ಜರುಗಿದವು.



ಮಧ್ಯಾಹ್ನ ಸುಮಾರು 3 ಗಂಟೆಗೆ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದೊಂದಿಗೆ 'ಕನ್ನಡ ಮತ್ತು ಮರಾಠಿ ರಂಗಭೂಮಿಯ ಇತ್ತೀಚಿನ ಬೆಳವಣಿಗೆಗಳು' ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವು ನಡೆಯಿತು. ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ಆಶಯ





ನುಡಿಗಳನ್ನಾಡಿದರು. ಪ್ರೊ. ಕೆ. ಎ. ಬನಟ್ಟಿ ಅವರ ಗೌರವ ಉಪಸ್ಥಿತಿಯಲ್ಲಿ ನಡೆದ ಈ ಗೋಷ್ಠಿಯಲ್ಲಿ ನಾಟಕಕಾರ ಡಾ. ಭರತ್‌ಕುಮಾರ್ ಪೊಲಿಪು ಮತ್ತು ಡಾ. ಬಿ. ಆರ್. ಮಂಜುನಾಥ್ ಅವರು ಉಭಯ ಭಾಷಾ ರಂಗಭೂಮಿಯ ಸ್ಥಿತಿಗತಿಗಳ ಬಗ್ಗೆ ವಿಚಾರ ಮಂಡನೆ ಮಾಡಿದರು. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇದರ ಅಧ್ಯಕ್ಷರಾದ ಡಾ. ಕೆ. ವಿ. ನಾಗರಾಜ್ ಮೂರ್ತಿ ಅವರು ಈ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.



ವಿಚಾರ ಸಂಕಿರಣದ ನಂತರ ರಂಗಸೌರಭ ತಂಡದಿಂದ ಡಾ. ಯು. ಆರ್. ಅನಂತಮೂರ್ತಿ ಅವರ ಕಥೆ ಆಧಾರಿತ 'ಮೌನಿ' ನಾಟಕ ಪ್ರದರ್ಶನ ಗೊಂಡಿತು. ಡಾ. ಕೆ. ವಿ. ನಾಗರಾಜ್ ಮೂರ್ತಿ ಅವರ ನಿರ್ದೇಶನದಲ್ಲಿ ಮೂಡಿಬಂದ ಈ ನಾಟಕವು, ಮಲೆನಾಡಿನ ಹಿನ್ನೆಲೆಯಲ್ಲಿ ಇಬ್ಬರು ವ್ಯಕ್ತಿಗಳ ನಡುವಿನ ಆಸ್ತಿ ವಿವಾದ ಮತ್ತು ಮಠದ ಹಕ್ಕಿನ ಬಗೆಗಿನ ಸಂಘರ್ಷವನ್ನು ಪರಿಣಾಮಕಾರಿಯಾಗಿ ಚಿತ್ರಿಸಿತು. ಜೀವನದ ಜಿದ್ದಾಜಿದ್ದಿಯಲ್ಲಿ ಸೋತು ಮೌನಕ್ಕೆ ಶರಣಾಗುವ ನಾಯಕ ತನ್ನ ಅಸ್ತಿತ್ವದ ಜೊತೆಗೆ ಕಳೆದುಹೋಗುವ ಯಾತನಾಮಯ ಕಥಾವಸ್ತು ಪ್ರೇಕ್ಷಕರ ಮನಸೂರೆಗೊಂಡಿತು.





**ಮೈಸೂರು ಅಸೋಸಿಯೇಷನ್, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಇವರು ಸಂಯುಕ್ತ ಆಶ್ರಯದಲ್ಲಿ ಕನ್ನಡ ಮತ್ತು ಮರಾಠಿ ರಂಗಭೂಮಿ ಇತ್ತೀಚಿನ ಬೆಳವಣಿಗೆಗಳು ರಾಷ್ಟ್ರೀಯ ವಿಚಾರ ಸಂಕಿರಣ**

# ವ್ಯಾಪಕ ಹಾಗೂ ವಾಸ್ತವವಾದಿ ರಂಗಭೂಮಿಯನ್ನು ಅತ್ಯಂತ ಪ್ರಬಲವಾಗಿ ಕಟ್ಟಿಕೊಟ್ಟದ್ದು ಮರಾಠಿ ರಂಗಭೂಮಿ – ಡಾ. ಭರತ್ ಕುಮಾರ್ ಪೊಲಿಪು






ಕರ್ಕಿ ಹಾಸ್ಯಗಾರ ಮೇಳದ ನಾಟಕ ನೋಡಿ ಮೆಚ್ಚಿ ಪ್ರೇರಿತರಾದ ರಾಜ ಅರಮನೆಯಲ್ಲಿ ವಿಷ್ಣುದಾಸ ಭಾವೆ ಅವರಿಂದ ಸೀತಾ ಸ್ವಯಂವರ ನಾಟಕ ಬರೆಸಲ್ಪಟ್ಟಿದ್ದರೂ ನಾಟಕ ಮಾಡಲು ಯಾರೂ ಸಿದ್ದರಿರುವುದಿಲ್ಲ. ಅನಂತರ ಅರಮನೆಯ ಬಾಣಸಿಗರಿಂದ ಜಮೀನು ಕೊಡಿಸುತ್ತೇವೆ ಎಂದು ಹೇಳಿ ನಾಟಕ ಮಾಡಿಸಿ ಮುಂದೆ ಅದು ಮುಂಬಯಿಯಲ್ಲಿ ಪ್ರದರ್ಶಿಸಲ್ಪಟ್ಟಿತು.

ಕಿರ್ಲೋಸ್ಕರ್ ಯುಗ ಅಂದರೆ ಸಂಗೀತ ನಾಟಕಗಳ ಯುಗ. ಮೊದಲು ಅವರು ಅನುವಾದ ಮಾಡಿದ್ದು ಶಾಕುಂತಲ ಎಂಬ ಸಂಗೀತ ನಾಟಕ. ಈ ಮೂಲಕ ಮರಾಠಿ ನಾಟಕ ಪರಂಪರೆಯನ್ನು ಹುಟ್ಟು ಹಾಕಿದರು. ಅನಂತರ ಪೌರಾಣಿಕ, ಐತಿಹಾಸಿಕ ನಾಟಕಗಳು ರಚಿಸಲ್ಪಟ್ಟವು.





ಮರಾಠಿಯ ಪ್ರಾಯೋಗಿಕ ರಂಗಭೂಮಿಗೆ ಅಡಿಪಾಯ ಹಾಕಿದವರು ರಾಮ ಗಣೇಶ್ ಗಡ್ಕರಿ ಅವರು. ಮರಾಠಿ ರಂಗಭೂಮಿಗೆ ನವ್ಯತೆಯನ್ನು ತಂದವರು ಭಗವಾನ್ ರಾವ್ ವಿಠ್ಠಲ ವರೇಕರ್. ಹೀಗೆ ಮರಾಠಿ ರಂಗಭೂಮಿಯಲ್ಲಿ ಹೆಸರಾಂತ ನಾಟಕಕಾರರು ಇದ್ದರು. ಜಯವಂತ ದಳ್ವಿ ಅವರು ಅನೇಕ ಉತ್ತಮ ನಾಟಕಗಳನ್ನು ತಂದರು. ರಂಗಭೂಮಿಯ ಭಾಷ್ಯಕ್ಕೆ ಹೊಸರೂಪ ನೀಡಿದವರು ವಿಜಯ ತೆಂಡೂಲ್ಕರ್ ಅವರು. ಮರಾಠಿಯಲ್ಲಿ ಇಂದಿಗೂ ಹೊಸ ವಿಷಯಗಳ ಉತ್ತಮ ನಾಟಕಗಳು ರಚಿಸಲ್ಪಟ್ಟವೆ.ಹೀಗೆ ಮರಾಠಿ ರಂಗಭೂಮಿಯ ಉಗಮ ವಿಕಾಸದ ಕುರಿತು ರಂಗಕರ್ಮಿ, ಕರ್ನಾಟಕ ಸಂಘ ಮಾತುಂಗದ ಅಧ್ಯಕ್ಷರಾದ ಡಾ. ಭರತ್ ಕುಮಾರ್ ಪೊಲಿಪು ಅವರು ತಮ್ಮ ವಿಚಾರಗಳನ್ನು ಮಂಡಿಸಿದರು.



ಅವರು ಮೈಸೂರು ಅಸೋಸಿಯೇಷನ್, ಕರ್ನಾಟಕ ಗಡಿಯ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಆದಿತ್ಯವಾರ ಮಾರ್ಚ್ 1ರಂದು ಮೈಸೂರು ಅಸೋಸಿಯೇಷನ್ನಿನಲ್ಲಿ ಶ್ರೀರಂಗ ಸಂಸ್ಮರಣೆ ನಾಟಕೋತ್ಸವದ ಅಂಗವಾಗಿ ನಡೆದ ಕನ್ನಡ ಮರಾಠಿ ರಂಗಭೂಮಿ ಇತ್ತೀಚಿನ ಬೆಳವಣಿಗೆಗಳು ಕುರಿತು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಉಪನ್ಯಾಸ ನೀಡಿದರು.

ಕರ್ನಾಟಕ ಹಾಗೂ ಮಹಾರಾಷ್ಟ್ರ *(ಪುಟ 18ಕ್ಕೆ)*

# ಕನ್ನಡದ ಪರಿಚಾರಿಕೆಯಲ್ಲಿ 90 ವರ್ಷಗಳನ್ನು ಪೂರ್ಣಗೊಳಿಸಿದ ಮುಂಬಯಿಯ ಹಿರಿಯ ಸಂಸ್ಥೆ: ಮುಂಬಯಿ ಕನ್ನಡ ಸಂಘ




ಉದ್ಯೋಗ, ಉದ್ಯಮದ ಉದ್ದೇಶವನ್ನಿರಿಸಿಕೊಂಡು ತಾಯ್ನಾಡನ್ನು ಬಿಟ್ಟುಮುಂಬಯಿ ಸೇರಿದ ಕನ್ನಡಿಗ ಮೊದಲಿಗೆ ತನ್ನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡ. ನಂತರ ತನ್ನ ನಾಡು, ನುಡಿ, ಸಂಸ್ಕೃತಿ ಸಾಹಿತ್ಯಗಳತ್ತ ಗಮನ ಹರಿಸಿದ. ಒಂಟಿಯಾಗಿದ್ದ ಕನ್ನಡಿಗ ಜಂಟಿಯಾಗುವ ಬಯಕೆಯಿಂದ ಸಂಘ ಸಂಸ್ಥೆಗಳನ್ನು ಕಟ್ಟಲು ಆರಂಭಿಸಿದ. ಕಾವ್ಯರ್ಷಿ ಕುವೆಂಪುವರವರು "ಎಲ್ಲಾದರೂ ಇರು, ಎಂತಾದರೂ ಇರು, ನೀ ಕನ್ನಡವಾಗಿರು"ಎಂಬ ಕಹಳೆಯನ್ನು ಮೊಳಗಿಸುವ ಮೊದಲೇ ಇಲ್ಲಿ ಕನ್ನಡಿಗ ತನ್ನತನವನ್ನು ಮೆರೆಸಲು ಆರಂಭಿಸಿದ್ದ. ಜಾತಿ ಬಾಂಧವರನ್ನು ಒಗ್ಗೂಡಿಸಲು ಜಾತಿ ಸಂಸ್ಥೆಗಳನ್ನು ಕಟ್ಟಿಕೊಂಡ. ಇಷ್ಟರಲ್ಲೇ ತೃಪ್ತಿಪಡದೆ ಭಾಷೆಯ, ಭಾಷಾ ಬಾಂಧವರ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಸಂಘಗಳನ್ನು ಕಟ್ಟಿದ. ಕ್ರಿಯಾಶೀಲ, ರಚನಾತ್ಮಕ ಕಾರ್ಯಕ್ರಮಗಳಿಂದ ಕನ್ನಡಿಗರಲ್ಲಿ ನಾಡು ನುಡಿಯ ಬಗ್ಗೆ ಅಭಿಮಾನವನ್ನು ಮೊಳೆಯಿಸಿದ. ಸಾಹಿತ್ಯ, ಸಂಗೀತ, ನಾಟಕ, ಯಕ್ಷಗಾನಗಳು ಒಳನಾಡಿನಂತೆ ಇಲ್ಲಿಯೂ ಮನೆ ಮಾತಾಗತೊಡಗಿತು. ಹೀಗೆ ಕನ್ನಡವನ್ನು ಉಳಿಸಿ ಬೆಳೆಸುವ, ಕನ್ನಡದ ಸಂಸ್ಕೃತಿಯನ್ನು ಮೆರೆಯಿಸುವ ಮಹಾನ್ ಧ್ಯೇಯದೊಂದಿಗೆ ಹುಟ್ಟಿಕೊಂಡ ಸಂಘ ಸಂಸ್ಥೆಗಳ ಪೈಕಿ ಮುಂಬಯಿ ಕನ್ನಡ ಸಂಘವೂ ಒಂದು.

1936ರ ಚಾಂದ್ರಮಾನ ಯುಗಾದಿಯ ಶುಭ ದಿನದಂದು ಮಧ್ಯ ಮುಂಬಯಿಯ ವರ್ಲಿಯ ನೀಲಕಂಠೇಶ್ವರ ದೇವಸ್ಥಾನದಲ್ಲಿ ಕೀರ್ತನ ಕೇಸರಿ ಬೇಲೂರು ಕೇಶವದಾಸರಿಂದ ಉದ್ಘಾಟನೆಗೊಂಡ ಮುಂಬಯಿ ಕನ್ನಡ ಸಂಘವು ಹಲವಾರು ವರ್ಷಗಳ ನಂತರ ಮಾಟುಂಗಾದ ಭಾವುದಾಜಿ ರಸ್ತೆಯಲ್ಲಿರುವ ವೆಂಕಟೇಶ ನಿವಾಸಕ್ಕೆ ಸ್ಥಳಾಂತರಗೊಂಡಿತು. ಭದ್ರಬುನಾದಿಯೊಂದಿಗೆ ಬೆಳೆದು ಇದೀಗ ಮಹತ್ವಪೂರ್ಣ 90 ವರ್ಷಗಳನ್ನು ಪೂರೈಸಿ ಮುನ್ನಡೆಯುತ್ತಿದೆ. ಒಂದು ಸಂಸ್ಥೆಯ ಜೀವಮಾನದಲ್ಲಿ 90 ವರ್ಷಗಳ ಅವಧಿ ಬಹುದೊಡ್ಡ ಕಾಲಮಾನವಾಗಿದೆ. ರಚನಾತ್ಮಕ ಕಾರ್ಯಕ್ರಮಗಳು, ಕ್ರಿಯಾಶೀಲ ಚಟುವಟಿಕೆಗಳು ಇಲ್ಲದೆ ಯಾವುದೇ ಸಂಸ್ಥೆ ಬೆಳೆಯಲಾರದು. ಆದುದರಿಂದಲೇ ಪುರಂದರದಾಸರ ಆರಾಧನೆ, ಬಸವ ಜಯಂತಿ, ಗಣೇಶೋತ್ಸವ, ಶಾರದಾ ಪೂಜೆ, ದತ್ತಿ ಉಪನ್ಯಾಸ, ಕಮ್ಮಟಗಳು, ಸಾಹಿತ್ಯ ಚಟುವಟಿಕೆಗಳು, ಕನ್ನಡೇತರರ ಸಲುವಾಗಿ ಕನ್ನಡ ತರಗತಿ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು 90 ವರ್ಷಗಳಿಂದ ಸತತವಾಗಿ ಸಂಘವನ್ನು ಮುನ್ನಡೆಸಿಕೊಂಡು ಬಂದ ಮಹನೀಯರಿಗೆ ಈ ಸಂಸ್ಥೆಯನ್ನು ಉಳಿಸಿ ಬೆಳೆಸಿದ ಶ್ರೇಯಸ್ಸು ಸಲ್ಲುತ್ತದೆ. ಮುಂಬಯಿಯ ಪ್ರಥಮ ಕನ್ನಡ ಶಾಲೆಯಾಗಿರುವ ವಡಾಲಾದ ಎನ್.ಕೆ.ಇ.ಎಸ್. ಶಾಲೆಯನ್ನು ಸ್ಥಾಪಿಸಿದ ಶ್ರೇಯ ಮುಂಬಯಿ ಕನ್ನಡ ಸಂಘಕ್ಕೆ ಸಲ್ಲುತ್ತದೆ.



ಕಳೆದ ಒಂಭತ್ತು ದಶಕಗಳಿಂದ ಸಂಘವು ನಿರಂತರವಾಗಿ ಕನ್ನಡಪರ ಸೇವೆಗಳನ್ನು ಮಾಡುತ್ತಾ ಬಂದಿರುವುದು ಮಾತ್ರವಲ್ಲದೆ ವಿವಿಧ ವಿಷಯಗಳ ಮೇಲಿನ ಸುಮಾರು

ಹದಿನಾಲ್ಕು ಸಾವಿರಕ್ಕೂ ಮಿಕ್ಕಿ ಪುಸ್ತಕಗಳಿರುವ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನೂ ಹೊಂದಿದೆ. ನಮ್ಮ ಸಂಘದ ಸದಸ್ಯರು ಮಾತ್ರವಲ್ಲದೆ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನಾ ವಿದ್ಯಾರ್ಥಿಗಳು ಕೂಡಾ ಈ ಗ್ರಂಥಾಲಯದಲ್ಲಿ ದೊರೆಯುವ ಅಪರೂಪದ ಪುಸ್ತಕಗಳ ಪ್ರಯೋಜನ ಪಡೆಯುತ್ತಿದ್ದಾರೆ. ದ.ರಾ.ಬೇಂದ್ರೆ, ಶಿವರಾಮ ಕಾರಂತ, ವೀ.ಸೀ.,ಸಿ.ಕೆ.ವೆಂಕಟರಾಮಯ್ಯ, ಮಾಸ್ತಿ, ಎಸ್.ಎಲ್. ಭೈರಪ್ಪ, ಪಿ. ಲಂಕೇಶ್, ಜಿ.ಎಸ್. ಶಿವರುದ್ರಪ್ಪ, ಕುರ್ತಕೋಟಿ, ಹಂಪನಾ, ಮಲ್ಲೇಪುರಂ ವೆಂಕಟೇಶ ಜಿ., ಎಂ, ರಾಮಚಂದ್ರ ಹೀಗೆ ಕರ್ನಾಟಕದ ಹಿರಿಯ ಸಾಹಿತಿಗಳು, ರಾಜ ಮನೆತವರಾದ ಶ್ರೀ ಜಯಚಾಮರಾಜ ಒಡೆಯರ್, ರಾಜಕೀಯ ಧುರೀಣರಾದ ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಎಚ್.ಸಿ. ದಾಸಪ್ಪ, ಜನಾರ್ದನ ಪೂಜಾರಿ, ರಾಣಿ ಸತೀಶ್ ಮುಂಬಯಿಗೆ ಬಂದಾಗಲೆಲ್ಲಾ ಸಂಘಕ್ಕೆ ಭೇಟಿ ನೀಡಿ ತಮ್ಮ ವಿದ್ವತ್ತನ್ನು ಸಂಘದ ಸದಸ್ಯರೊಂದಿಗೆ ಹಂಚಿಕೊಂಡಿದ್ದಾರೆ ಮತ್ತು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮುಂಬಯಿಯ ಹಿರಿಯ ಸಾಹಿತಿಗಳಾದ ಕೃಷ್ಣಕುಮಾರ ಕಲ್ಲೂರ, ಚಿದಂಬರ ದೀಕ್ಷಿತ, ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಅರವಿಂದ ನಾಡಕರ್ಣಿ, ಬಿ.ಎ.ಸನದಿ, ಡಾ.ಜಿ.ಡಿ ಜೋಶಿ, ಡಾ. ವ್ಯಾಸರಾವ್ ನಿಂಜೂರು, ಡಾ. ಸುನೀತಾ ಶೆಟ್ಟಿ, ಡಾ.ವಿಶ್ವನಾಥ ಕಾರ್ನಾಡ್, ಜಯಂತ ಕಾಯ್ಕಿಣಿ ಮೊದಲಾದವರು ಒಂದಲ್ಲ ಒಂದು ವಿಧದಲ್ಲಿ ಸಂಘದೊಂದಿಗೆ ಸಂಪರ್ಕವಿರಿಸಿಕೊಂಡು ಸಂಘದ ಬೆಳವಣಿಗೆಗೆ ಸಹಕರಿಸಿದ್ದಾರೆ. ಮುಂಬಯಿ ಕನ್ನಡ ಸಂಘವು ನಾಟಕೋತ್ಸವ, ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಸಂಗೀತ ಸುಧೆಯನ್ನು ಹರಿಸಿದೆ. 'ಸಾಹಿತ್ಯ ಕೂಟ' ಎನ್ನುವ ಮುಂಬಯಿಯ ಸಾಹಿತಿಗಳ ವೇದಿಕೆಯನ್ನು ಬೆಳೆಸಿದ ಶ್ರೇಯಸ್ಸು ಕೂಡಾ ಮುಂಬಯಿ ಕನ್ನಡ ಸಂಘಕ್ಕೆ ಸಲ್ಲುತ್ತದೆ.

ಮುಂಬಯಿಯಲ್ಲಿ ಈಗ ಸದಾ ಚಟುವಟಿಕೆಯಲ್ಲಿರುವ ಮುಂಬಯಿ ಕನ್ನಡ ಲೇಖಕಿಯರ ಬಳಗ 'ಸೃಜನಾ' ಹುಟ್ಟಿದ್ದು ಸಯಾನ್‌ನ ಗೋಕುಲ ಸಭಾಗೃಹದಲ್ಲಿ ಜರಗಿದ್ದ ಸಂಘದ ಒಂದು ಕಾರ್ಯಕ್ರಮದ ಮೂಲಕವೇ. ಮುಂಬಯಿ ಕನ್ನಡ ಸಂಘವು 1961ರಲ್ಲಿ ರಜತ ಮಹೋತ್ಸವ, 1986ರಲ್ಲಿ ಸುವರ್ಣ ಮಹೋತ್ಸವ, 1996ರಲ್ಲಿ ವಜ್ರ ಮಹೋತ್ಸವ ಮತ್ತು 2011 ರಲ್ಲಿ ಅಮೃತ ಮಹೋತ್ಸವವನ್ನು ಆಚರಿಸಿ ಈಗ ಶತಮಾನದತ್ತ ಸಾಗುತ್ತಿದೆ.

ಮಾಟುಂಗಾದ ಭಾವುದಾಜಿ ರಸ್ತೆಯಲ್ಲಿ ಸಂಘದ ಕಾರ್ಯಾಲಯವಿದ್ದ ವೇಂಕಟೇಶ ನಿವಾಸ ಕಟ್ಟಡವನ್ನು ಕೆಡವಲಾಗಿದ್ದು ಈಗ ಅದೇ ಜಾಗದಲ್ಲಿ ಭವ್ಯವಾದ ಬಹು ಮಹಡಿ ಕಟ್ಟಡ ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದ್ದು ಈ ಕಟ್ಟಡಕ್ಕೆ ಮುಂದಿನ ವರ್ಷ ಸಂಘದ ಕಛೇರಿಯನ್ನು ಸ್ಥಳಾಂತರಗೊಳಿಸಲಾಗುವುದು. ಇಲ್ಲಿ ಸುಸಜ್ಜಿತವಾದ ಗ್ರಂಥ ಭಂಡಾರ [ಡಿಜಿಟಲ್ ಗ್ರಂಥ ಭಂಡಾರವನ್ನು ಒಳಗೊಂಡು], ಸಂಘದ ಕಾರ್ಯಾಲಯ, ಹವಾ ನಿಯಂತ್ರಿತ ಕಂಪ್ಯೂಟರ್ ವ್ಯವಸ್ಥೆ ಮುಂತಾದ ಸೌಲಭ್ಯಗಳ ಏರ್ಪಾಡು ಮಾಡಲಾಗುತ್ತದೆ. ಅಲ್ಲದೆ ಹೊಸ ಕಛೇರಿಯ ಒಳಾಂಗಣ ವಿನ್ಯಾಸ ಕಾರ್ಯವನ್ನೂ ಕೈಗೆತ್ತಿಕೊಳ್ಳಲಾಗುತ್ತದೆ. ಇದರಿಂದಾಗಿ ಸಂಘದ ಮಾಸಿಕ ನಿರ್ವ:ಣಾ ವೆಚ್ಚಗಳು ಗಣನೀಯವಾಗಿ ಏರಿಕೆಯಾಗಲಿದೆ. ಹಾಗಾಗಿ ಇದಕ್ಕಾಗಿ ಒಂದು ಶಾಶ್ವತ ನಿಧಿಯನ್ನು ರಚಿಸಲಾಗಿದ್ದು ಈ ನಿಧಿಗೆ ಈಗಾಗಲೇ ಸಂಘದ ಸದಸ್ಯರು, ಹಿತ ಚಿಂತಕರು ಹಾಗೂ ಸಾರ್ವಜನಿಕರಿಂದ ದೇಣಿಗೆಯನ್ನು ಸಂಗ್ರಹಿಸಲಾಗುತ್ತಿದೆ. ಸಂಘವು ಸುಮಾರು 900ಕ್ಕೂ ಮಿಕ್ಕಿ ಸದಸ್ಯ ಸಂಪತ್ತನ್ನು ಹೊಂದಿರುವುದಾದರೂ ಆ ಪೈಕಿ ಹೆಚ್ಚಿನವರು ಅನೇಕ ಕಾರಣಗಳಿಂದಾಗಿ ಈಗ ಸಂಘದ ಸಂಪರ್ಕದಲ್ಲಿಲ್ಲ. ಅಂತಹವರು ಎಲ್ಲೇ ಇದ್ದರೂ ಉದಾರ ದಾನ ನೀಡಿ ಮುಂಬಯಿ ಮಣ್ಣಿನಲ್ಲಿ ಕನ್ನಡದ ತೇರನ್ನು ಎಳೆಯುತ್ತಿರುವ ಮುಂಬಯಿ ಕನ್ನಡ ಸಂಘದ ಕನ್ನಡ ಪರ ಕಾಯಕದಲ್ಲಿ ಕೈ ಜೋಡಿಸಬೇಕಾಗಿ ಕಳಕಳಿಯ ವಿನಂತಿ. ಮುಂಬಯಿ ಕನ್ನಡ ಸಂಘಕ್ಕೆ ನೀಡುವ ದೇಣಿಗೆಯು ಆದಾಯ ಕರ ಕಾಯ್ದೆಯ ಸೆಕ್ಷನ್ 80–ಜಿ ಅಡಿಯಲ್ಲಿ ಕರ ವಿನಾಯಿತಿಗೆ ಅರ್ಹವಾಗಿರುತ್ತದೆ. ಸಂಘಕ್ಕೆ ಧನ ಸಹಾಯ ಮಾಡಲಿಚ್ಛಿಸುವವರು ಸಂಘದ ಈ ಕೆಳಗಿನ ಬ್ಯಾಂಕ್ ಖಾತೆಗೆ NEFT ಮೂಲಕ ನೇರವಾಗಿ ವರ್ಗಾಯಿಸಬಹುದು: Bombay Kannada Sangha, Canara Bank, Matunga East Branch, S/B Account N0. 0109101005571, IFSC : CNRB0000109 ಅಥವಾ BOMBAY KANNADA SANGHA ಈ ಹೆಸರಿಗೆ ಬರೆಯಲಾದ ಚೆಕ್ ಅನ್ನು ಸಂಘದ ಸದ್ಯದ ಕಾರ್ಯಾಲಯವಾಗಿರುವ 2- Sai Visava Co-Op. Society, Nappo Road, Hindu Colony, Dadar (East),Mumbai-400 014 ಇಲ್ಲಿಗೆ ಕಳುಹಿಸಿಕೊಡಬಹುದು. ರೂ. 25 ಲಕ್ಷಕ್ಕೂ ಹೆಚ್ಚಿಗೆ ದೇಣಿಗೆ ನೀಡುವವರ ಹೆಸರನ್ನು ಸಂಘದ ಕಾರ್ಯಾಲಯಕ್ಕೆ, ರೂ. 10 ಲಕ್ಷಕ್ಕಿಂತ ಅಧಿಕ ದೇಣಿಗೆ ನೀಡುವವರ ಹೆಸರನ್ನು ಗ್ರಂಥಾಲಯಕ್ಕೆ, ರೂ. 5 ಲಕ್ಷಕ್ಕಿಂತ ಹೆಚ್ಚಿನ ದೇಣಿಗೆ ನೀಡುವವರ ಹೆಸರನ್ನು ವಾಚನಾಯಲಯಕ್ಕೆ ಇರಿಸಲಾಗುವುದಲ್ಲದೆ ರೂ. 25,000ಕ್ಕಿಂತ ಅಧಿಕ ಧನ ಸಹಾಯ ನೀಡುವವರ ಹೆಸರನ್ನು ಸಂಘದ ಕಾರ್ಯಾಲಯದಲ್ಲಿ ಇರಿಸಲಾಗುವ ಅಮೃತ ಶಿಲೆಯ ಫಲಕದಲ್ಲಿ ನಮೂದಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ 98330 62084 ಈ ನಂಬರ್‌ನಲ್ಲಿ ಸಂಘವನ್ನು ಅಥವಾ 9819816380 ಈ ನಂಬರ್‌ನಲ್ಲಿ ಸಂಘದ ಅಧ್ಯಕ್ಷ ಗುರುರಾಜ್ ಎಸ್. ನಾಯಕ್‌ರನ್ನು ಸಂಪರ್ಕಿಸಬಹುದು.

**– ಸೋಮನಾಥ ಎಸ್. ಕರ್ಕೇರ,**
ಗೌರವ ಪ್ರಧಾನ ಕಾರ್ಯದರ್ಶಿ,
ಮುಂಬಯಿ ಕನ್ನಡ ಸಂಘ, ಫೋನ್: 98193 21186


ಕೃತಿಯ ಪರಿಚಯ ಲೇಖನ

# ‘ಸಾಗರದಲೆಗಳ ಮೇಲೆ’ ವಾಣಿಜ್ಯ ನೌಕೆಯ ನಾವಿಕನ ಅನುಭವ ಗಾಥೆ:




ಪರಿಚಯಕಾರರು : **ಶ್ರೀಧರ ಬಾಣಾವರ**

"ಸಾಗರದಲೆಗಳ ಮೇಲೆ" ಕೃತಿ ಫೆ 21 ರಂದು ಬೆಂಗಳೂರಲ್ಲಿ ಬಿಡುಗಡೆಯಾಗಿದೆ. ಇದು ಮುಂಬೈಯ ಮಾತುಂಗದ ಕಿಂಗ್ಸ್ ಸರ್ಕಲ್‌ನಲ್ಲಿ ಬಾಲ್ಯ ಕಳೆದ ಹುಡುಗನೊಬ್ಬನ ಸಮುದ್ರ ಜೀವನದ ಅನುಭವ ಗಾಥೆ. ಆ ಹುಡುಗ ಕಠಿಣ ಓದನ್ನು ಪೂರೈಸಿ, ಸುಮಾರು ಮುವ್ವತ್ತು ವರ್ಷಗಳಿಗೂ ಹೆಚ್ಚು ಕಾಲ – ಅಂದರೆ 1970ರಿಂದ 2000ರವರೆಗೆ – ವಾಣಿಜ್ಯ ನೌಕೆಗಳಲ್ಲಿ ರೇಡಿಯೋ ಆಫೀಸರ್ ಆಗಿ ಕೆಲಸ ಮಾಡಿದ ಅನುಭವಗಳನ್ನು ಈ ಪುಸ್ತಕದಲ್ಲಿ ಬಣ್ಣಿಸಿದ್ದಾನೆ. ಇದು ಕೇವಲ ಒಂದು ಆತ್ಮಕಥೆಯಲ್ಲ; ಸಮುದ್ರದ ಅಲೆಗಳ ಮೇಲೆ ಹರಿದಾಡಿದ ಜೀವನದ ರೋಮಾಂಚಕ ಕಥೆ, ತಂತ್ರಜ್ಞಾನದ ವಿಕಾಸದ ಕಥೆ ಮತ್ತು ಅಂತರರಾಷ್ಟ್ರೀಯ ಪ್ರದಕ್ಷಿಣೆಯ ಕಥೆ.



ವಿದ್ಯಾರಣ್ಯ

ಮುಂಬಯಿಯ ಕನ್ನಡದ ಮಧ್ಯಮ ವರ್ಗದ ಸಾಹಸಿ ಹುಡುಗನೊಬ್ಬ ಕಠಿಣ ಪರಿಶ್ರಮದಿಂದ ರೇಡಿಯೋ ಆಫೀಸರ್ ಆಗಿ, ಸಮುದ್ರದಲ್ಲಿ ದಶಕಗಳ ಕಾಲ ಕಳೆದು, ನಿವೃತ್ತಿಯ ನಂತರ, ಅವರ ವೃತ್ತಿ ಜೀವನದ ಅನುಭವಗಳನ್ನು ತಮ್ಮ ನೆನಪಿನ ಕೋಶದಿಂದ ಹೊರಗೆಳೆದು ಈ ಪುಸ್ತಕದ ರೂಪದಲ್ಲಿ ನಮ್ಮೆದುರಿಗೆ ಇಟ್ಟಿದ್ದಾರೆ. ಇಲ್ಲಿನ ವಿವರಗಳು ಕೇವಲ ವೃತ್ತಿಪರ ವಿವರಗಳಲ್ಲ, ಮಾನವೀಯ ಸಂಬಂಧಗಳು, ಸಾಹಸಗಳು ಮತ್ತು ತಂತ್ರಜ್ಞಾನದ ಬದಲಾವಣೆಗಳ ಸಂಕ್ರಮಣಕ್ಕೆ ಸಾಕ್ಷಿಯಾಗಿದೆ. ಈ ಪುಸ್ತಕದಲ್ಲಿ ಅವರು ತಮ್ಮ ಅನುಭವಗಳನ್ನೂ, ತಾಂತ್ರಿಕ ವಿವರಗಳನ್ನೂ ಆಕರ್ಷಣೀಯ ಕಥೆಗಳಂತೆ ಬರೆದಿದ್ದಾರೆ. ಇದು ಓದುಗರನ್ನು ಕಟ್ಟಿಹಾಕುವಂತಿದೆ.




ಇಲ್ಲಿ ನಾವು ಪರಿಚಯಿಸಿಕೊಳ್ಳುತ್ತಿರುವುದು ಕೇವಲ ಒಂದು ಪುಸ್ತಕವನ್ನಲ್ಲ. ಅರಬ್ಬೀ ಸಮುದ್ರದ ತೀರದಿಂದ ಹೊರಟು, ಜಗತ್ತಿನ ಏಳು ಸಾಗರಗಳನ್ನು ಸುತ್ತಿದ್ದ ಒಬ್ಬ ಸಾಹಸಿಯ ಜೀವನದ ‘ಲಾಗ್ ಬುಕ್’ ಅನ್ನು. 1970ರಿಂದ 2000ದ ಅವಧಿ, ತಂತ್ರಜ್ಞಾನ ಮೌನವಾಗಿದ್ದ ಕಾಲ. ಮೊಬೈಲ್ ಇಲ್ಲದ, ಇಂಟರ್ನೆಟ್ ಇಲ್ಲದ ಆ ಕಾಲದಲ್ಲಿ ಹಡಗಿಗೂ ಹೊರಲೋಕಕ್ಕೂ ಇದ್ದ ಏಕೈಕ ಕೊಂಡಿ ‘ರೇಡಿಯೋ ಆಫೀಸರ್’. ಆ ಕೊಂಡಿಯ ಕಥೆಯೇ ಈ ‘ಸಾಗರದಲೆಗಳ ಮೇಲೆ’. ಈ ಕೆಲಸದಲ್ಲಿ ಈಗಾಗಲೇ ಇದ್ದ ಸ್ನೇಹಿತನೊಬ್ಬನ ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷಿತ ವರ್ಣನೆ ಹಾಗೂ ಉದ್ಯೋಗಕ್ಕೆ ತಗಲುಹಾಕಿಕೊಳ್ಳಲೇಬೇಕಾದ ವಯಸ್ಸು, ಲೇಖಕನನ್ನು ಈ ಕ್ಷೇತ್ರಕ್ಕೆ ಎಳೆಯುತ್ತದೆ.

ಪುಸ್ತಕದಲ್ಲಿನ ವಿವರಗಳು ಎರಡು ಭಾಗಗಳಲ್ಲಿ ಹಂಚಿಕೊಂಡಿವೆ. ಒಟ್ಟು 109 ಅಧ್ಯಾಯಗಳು ಮತ್ತು ಸುಮಾರು 300 ಪುಟಗಳು. ಮೊದಲ ಭಾಗ ಹೆಚ್ಚು ವೈರ್‌ಲೆಸ್ ಕಮ್ಯುನಿಕೇಷನ್‌ಗೆ ಮೀಸಲು. ಇದೇ ಮುಖ್ಯ ವರ್ಗೀಕರಣದಡಿ 57 ಅಧ್ಯಾಯಗಳಿವೆ. ಇದು ಸಮುದ್ರದಲ್ಲಿನ ಸಂವಹನದ ಇತಿಹಾಸದಿಂದ ಆರಂಭವಾಗುತ್ತದೆ. ಮೋರ್ಸ್ ಕೋಡ್‌ನ ಬಗ್ಗೆ ವಿವರವಾಗಿ ಬರೆಯಲಾಗಿದೆ. ಮೋರ್ಸ್ ಕೋಡ್ ಎಂದರೇನು? ಟೆಲಿಗ್ರಾಂ ನಲ್ಲಿ ಬಳಸುವಾಗ ಕಟ್ ಮತ್ತು ಕಡಾ ಎಂದು ಬಳಸುವ ಎರಡು ಶಬ್ದಗಳ ಮೂಲಕ ಹೇಗೆ ಸಂದೇಶಗಳು ಹರಿದಾಡುತ್ತಿದ್ದವು? ನೌಕಾ ಭಾಷೆಯಲ್ಲಿ ಇವೇ ಡಿಟ್ ಮತ್ತು ಡಾಹ್. ಸಂವಹನದ ಅದರಲ್ಲೂ ನೌಕೆಗೆ ಸಂಬಂಧಪಟ್ಟ ಸಂವಹನದ ಇತಿಹಾಸವನ್ನು 19ನೇ ಶತಮಾನದಿಂದ ಆರಂಭಿಸಿ, ಎರಡನೆಯ ಮಹಾಯುದ್ಧದ ನಂತರದ ಪರಿಸ್ಥಿತಿ, ಇವರು 1970ರ ಸುಮಾರಿಗೆ ಆ ಕ್ಷೇತ್ರಕ್ಕೆ ಕಾಲಿಡುವ ಕಾಲದಲ್ಲಿದ್ದ ಪರಿಸ್ಥಿತಿಯ ವಿವರಣೆ ಕೊಡುತ್ತಾರೆ.

ಅಂತಹ ವೃತ್ತಿಗೆ ಬೇಕಾದ ತರಬೇತಿಗೆ, ದುರ್ಲಭವಾದರೂ ಅಲ್ಪ ಸ್ವಲ್ಪ ಅನುಕೂಲಕರವಾಗುವ ತರಬೇತಿ ಸಂಸ್ಥೆಗಳು ಅವರ ಅದೃಷ್ಟಕ್ಕೆ ಮುಂಬಯಿಯಲ್ಲೇ ಸಿಗುತ್ತವೆ. ತರಬೇತಿಯ ಭಾಗವಾಗಿ ಕಠಿನ ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ಎದುರಿಸಿ, ಕೇವಲ ಶೇ. 1–2 ರಷ್ಟು ಮಂದಿ ಉತ್ತೀರ್ಣರಾಗುತ್ತಿದ್ದವರ ಪೈಕಿ ಇವರೊಬ್ಬರಾಗಿ, ಕೊನೆಗೂ ಭಾರತ ಸರ್ಕಾರ ಹಾಗೂ ದೇಶೀಯ, ಅಂತಾರಾಷ್ಟ್ರೀಯ ನೌಕಾ ಸಂಸ್ಥೆಗಳು ನೀಡುತ್ತಿದ್ದ ಪ್ರಮಾಣ ಪತ್ರಗಳನ್ನೂ, ಪಾಸ್‌ಪೋರ್ಟ್ ಇತ್ಯಾದಿಗಳನ್ನೂ ಪಡೆದು, ಅಂದಿನ ಪರಿಸ್ಥಿತಿಯಲ್ಲಿ ಸ್ವಲ್ಪ ಹೆಚ್ಚೇ ಎನಿಸುವ ಸಂಬಳವನ್ನು ಪಡೆಯುವ ನಿರೀಕ್ಷೆಯಲ್ಲಿ, ಸಮುದ್ರದ ದಡ ದಾಟಿ ಸೂಕ್ತ ಸಮವಸ್ತ್ರಧಾರಿಯಾಗಿ ಹಡಗಿನ ಒಳಕ್ಕೆ ಕಾಲಿಡುತ್ತಾರೆ. ಈ ಪ್ರಯಾಣದ ಅತಿ ಸೂಕ್ಷ್ಮ ವಿವರಗಳನ್ನು ಸುಮಾರು ನಾಲ್ಕೈದು ದಶಕಗಳ ನಂತರವೂ ತಮ್ಮ ಖಾಸಗಿ ನೆನಪಿನ ಕೋಠಿಯಿಂದ ಯಾವುದೇ ಕೃತಕ ಬುದ್ಧಿಮತ್ತೆಯ ಸಹಾಯವಿಲ್ಲದೆ ಹೊರತೆಗೆದು, ಅದಕ್ಕೆ ಸರಾಗವಾಗಿ ಓದಲನುವಾಗುವ ಸರಳ ಕನ್ನಡದ ಉಡುಗೆ ತೊಡಿಸಿ ನಮ್ಮ ಮುಂದೆ ನಿಲ್ಲಿಸಿದ್ದಾರೆ.

ಮೊದಲ ಭಾಗದಲ್ಲಿ ರೇಡಿಯೋ ಆಫೀಸರ್‌ನ ಕರ್ತವ್ಯಗಳ ಬಗ್ಗೆಯೂ ವಿವರವಿದೆ.ಮೊದಲ ಭಾಗದ ಹೈಲೈಟ್ ಏನೆಂದರೆ, ಮೋರ್ಸ್ ಕೋಡ್‌ನಿಂದ ಆಧುನಿಕ ತಂತ್ರಜ್ಞಾನದ ವಿಕಾಸದ ಒಂದು ಸಜೀವ ಚಿತ್ರಣ. ನಾವೆಲ್ಲಾ ಯಾರ್ಯಾರು ತಂತ್ರಜ್ಞಾನದ ಬದಲಾವಣೆಗಳನ್ನು ಸಾಕ್ಷಿಯಾಗಿ

ಕಂಡಿದ್ದೀವೋ, ಅವರೆಲ್ಲರಿಗೂ ಈ ಬದಲಾವಣೆಗಳನ್ನು ನಾವೇ ಕಂಡಂತೆ, ನಮ್ಮದೇ ಅನುಭವವೇನೋ ಎಂಬಂತೆ ಗುರುತಿಸಿಕೊಳ್ಳಬಹುದು. ಇದು ಕೇವಲ ತಾಂತ್ರಿಕ ವಿವರಗಳಲ್ಲ; ಅದರ ಹಿಂದಿನ ಅನುಭವದ ಕಥೆಗಳು, ಸವಾಲುಗಳು ಮತ್ತು ಜಯಗಳು.

ಎರಡನೇ ಭಾಗದಲ್ಲಿ ವ್ಯಾಪಾರಿ ಹಡಗುಗಳ ಬಗ್ಗೆ ಇಲ್ಲಿ ವಿವರಗಳಿವೆ. ದೊಡ್ಡ ದೊಡ್ಡ ಕಂಟೇನರ್‌ಗಳು, ತೈಲವಾಹಕಗಳು, ಶೀಘ್ರವಾಗಿ ಕೆಡುವ ಪದಾರ್ಥಗಳಿಗೆ ಬೇರೆ ಕೋಲ್ಡ್ ಸ್ಟೋರೇಜ್, ಪ್ರಾಣಿಗಳ ಸಾಗಣೆ, ಹೀಗೆ ಹಲವು ಬಗೆಯ ಹಡಗುಗಳು, ಅವುಗಳಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪ್ರಕ್ರಿಯೆಯ ವಿವರಗಳು. ಹಡಗುಗಳಲ್ಲಿ ಸರಕುಗಳನ್ನು ಹೇಗೆ ತುಂಬುತ್ತಾರೆ? ಹೇಗೆ ಖಾಲಿ ಮಾಡುತ್ತಾರೆ? ಇವುಗಳಲ್ಲಿನ ಸವಾಲುಗಳು, ಸುರಕ್ಷತಾ ಕ್ರಮಗಳು ಮತ್ತು ಅಂತರರಾಷ್ಟ್ರೀಯ ಮಟ್ಟದ ಕೆಲಸದ ವಿವರಗಳು ಇಲ್ಲಿವೆ. ಲೇಖಕರು ತಮ್ಮ ಅನುಭವಗಳ ಮೂಲಕ ಇವುಗಳನ್ನು ಸವಿವರವಾಗಿ ಹಂಚಿಕೊಳ್ಳುತ್ತಾರೆ. ಬಿರುಗಾಳಿಯಲ್ಲಿ ನೌಕೆಗಳನ್ನೂ ಅದರಲ್ಲಿನ ಸರಕುಗಳನ್ನೂ ನಿರ್ವಹಿಸುವ ವಿವರಗಳು ಇಲ್ಲಿವೆ. ವಿವಿಧ ಬಂದರುಗಳಲ್ಲಿ ಅನೇಕ ಕಾರಣಗಳಿಗೆ ತೊಂದರೆಗೊಳಗಾಗಿ ಎದುರಿಸಿದ ಸಂಗತಿಗಳು, ಇವೆಲ್ಲವೂ ಓದಿನ ಆಸಕ್ತಿಯನ್ನು ಹುಟ್ಟಿಸುತ್ತವೆ. ಹಡಗುಗಳು ಸಾಗರದಲ್ಲಿದ್ದಾಗ ಪಕ್ಕದಿಂದ ಪಕ್ಕಕ್ಕೆ ವಾಲುವ (ರೋಲಿಂಗ್), ಮೇಲಿನಿಂದ ಕೆಳಕ್ಕೆ ವಾಲುವ (ಹೀವಿಂಗ್) ಸಂದರ್ಭಗಳ ಪರಿಣಾಮಗಳನ್ನೂ, ನಾವಿಕರು ಅನುಭವಿಸುವ ಸೀ ಸಿಕ್‌ನೆಸ್, ಅದಕ್ಕೆ ಪರಿಹಾರ, ಅದೇ ಕಾರಣಕ್ಕೆ ಈ ಕೆಲಸ ಬಿಟ್ಟು ಹೋದವರ ಪ್ರಸಂಗಗಳು ಎಲ್ಲವೂ ಅನೇಕ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ.

ಇದರ ಜೊತೆಗೆ, ಅಂತಾರಾಷ್ಟ್ರೀಯ ಗಡಿಗಳ ಪ್ರೋಟೋಕಾಲ್‌ಗಳು. ಹಡಗುಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗುವಾಗ ಯಾವ ನಿಯಮಗಳನ್ನು ಪಾಲಿಸಬೇಕು? ಕಸ್ಟಮ್ಸ್, ಇಮಿಗ್ರೇಷನ್ ಮತ್ತು ಸಮುದ್ರ ಕಾನೂನುಗಳು ಇವುಗಳನ್ನು ತಮ್ಮ ಸ್ವಂತ ಅನುಭವಗಳ ಮೂಲಕ, ಹಾಸ್ಯದೊಂದಿಗೆ, ಸಾಹಸದೊಂದಿಗೆ ಅನುಭವಿಸಿ ಬರೆದಿದ್ದಾರೆ. ಲೇಖಕರ ಹಾಸ್ಯಪ್ರಜ್ಞೆ, ಸಮಯ ಸ್ಫೂರ್ತಿ, ಸಮಸ್ಯೆಗಳನ್ನು ಬಗೆಹರಿಸುವ ಚಾಕಚಕ್ಯತೆ ಇವರ ಪ್ರಯಾಣದುದ್ದಕ್ಕೂ ಇವರನ್ನು ಸ್ನೇಹಜೀವಿಯಾಗಿರಿಸಿರುವುದನ್ನು ಇಲ್ಲಿ ಕಾಣಬಹುದು (ಇದು ಕನ್ನಡಿಗರ ಶಕ್ತಿ). ಪರಿಸ್ಥಿತಿಗೆ ಅನುಗುಣವಾಗಿ, ಅನೇಕ ಸಂದರ್ಭಗಳಲ್ಲಿ ಇವರು ತಮ್ಮ ಪಾಲಿಗೆ ಬಂದ ವೃತ್ತಿಯೇತರ ಅಂದರೆ, ಹಡಗಿನ ಬಜೆಟ್ ಮುಂತಾದ ಹಣಕಾಸಿನ ನಿರ್ವಹಣೆ (ಪರ್ಸರ್), ಅಡಿಗೆಯವರ, ಬೇರೆ ಸಿಬ್ಬಂದಿಗಳ ನಿರ್ವಹಣೆ, ಇವೆಲ್ಲವನ್ನೂ ನಿರ್ವಹಿಸಿರುವ ರೀತಿ ಮೆಚ್ಚುವಂತಹುದು. ಪ್ರಪಂಚದ ಬೇರೆ ಬೇರೆ ಭಾಗಗಳ ಅಧಿಕಾರಿಗಳು, ನೌಕರರು ಇವರಿಗೆ ಯಾವಾಗಲೂ ಜೊತೆಯಾಗುತ್ತಿದ್ದರಿಂದ ಅವರ ಒಡನಾಟ ಇವರಿಗೆ ಹಲವು ಸಿಹಿ, ಕಹಿ ಅನುಭವ ನೀಡಿರುವ ಬಗ್ಗೆ ಇವರು ಚಿತ್ರಿಸುವ ಪರಿ, ಕೃತಿಯನ್ನು ಇಷ್ಟಪಡಲು ಸಹಕಾರಿಯಾಗುತ್ತದೆ. ಅಧ್ಯಾಯ ಒಂದರಲ್ಲಿ ಫಿಲಿಫೈನ್ಸ್‌ನ ಗುಂಪಿನ ಆಹಾರ ವಿಚಾರಗಳು, ಅವರ ನಡತೆಗಳನ್ನು ಸೂಕ್ಷ್ಮವಾಗಿ ಅರಿತ ವಿದ್ಯಾರಣ್ಯ ಅವರಿಗೆ ಇಷ್ಟವಾಗುವ ರೀತಿ ಹಡಗಿನ ಆಹಾರಗಳನ್ನು ಒದಗಿಸಿ ಅವರನ್ನು ಖುಷಿಪಡಿಸುವ ಪರಿ ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಎಲ್ಲ ಸಂದರ್ಭಗಳಲ್ಲೂ ಇವರನ್ನು ಹೊರತು ಪಡಿಸಿ ಇಡೀ ನೌಕಾ ಸಿಬ್ಬಂದಿ ಮಾಂಸಾಹಾರಿಗಳೇ ಆಗಿರುತ್ತಾರೆ. ಆದರೂ ಇವರು ಇಡೀ ವೃತ್ತಿ ಜೀವನದಲ್ಲಿ ಹಲವು ಕುಕ್ ಗಳ ಸಹಾಯದಿಂದ ತಮ್ಮ ಸಸ್ಯಾಹಾರಿ ಶೀಲವನ್ನು ಕಾಪಾಡಿಕೊಂಡಂತೆ ಕಾಣುತ್ತದೆ.

ಬಂದರುಗಳಲ್ಲಿ ಹಡಗು ಕೆಲಕಾಲ ನಿಂತಾಗ ಹೇಗೆ ಹತ್ತಿರದ ನಗರಗಳಿಗೆ ಹೋಗಿ ಬರಬಹುದು? ಅಧಿಕೃತವಲ್ಲದೇ ಅಡ್ಡದಾರಿಗಳನ್ನು ಕಂಡುಕೊಳ್ಳುವ ಸಿಬ್ಬಂದಿ, ರಜಾ ವ್ಯವಸ್ಥೆ, ಅಧಿಕೃತ ಪದನಾಮ (ಕ್ಯಾಪ್ಟನ್, ಚೀಫ್ ಇಂಜಿನಿಯರ್ ಇತ್ಯಾದಿ)ಕ್ಕೆ ಬದಲಾಗಿ ಬಳಸುವ ವ್ಯವಸ್ಥೆ ಮೊದಲಾದ ಪ್ರಸಂಗಗಳನ್ನು ರೋಚಕವಾಗಿ ವರ್ಣಿಸಿದ್ದಾರೆ, ನಮ್ಮ ಈ ಮಾರ್ಕೋನಿ ಸಾಬ್. ರೇಡಿಯೋ ಕಂಡುಹಿಡಿದ ಮಾರ್ಕೋನಿ ಹೆಸರಿನ ಕಂಪನಿಯ ಉಪಕರಣಗಳೇ ಇವರ ರೇಡಿಯೋ ರೂಂನಲ್ಲಿ ತುಂಬಿರುತ್ತಿದ್ದುದರಿಂದ ಈ ಹೆಸರು ಇವರಿಗೆ ಬಂದಿತ್ತಂತೆ.

ಹಲವಾರು ತಾಂತ್ರಿಕ ವಿಷಯಗಳ ಅಧ್ಯಾಯಗಳು ಈ ಕೃತಿಯಲ್ಲಿ ಸೇರಿವೆ. ಇವುಗಳನ್ನು ಸರಳಗನ್ನಡದಲ್ಲಿ ಸಾಮಾನ್ಯರಿಗೂ ಅವುಗಳ ಪರಿಕಲ್ಪನೆ ಎಟಕುವಂತಹ ಬರಹದಲ್ಲಿ ವಿದ್ಯಾರಣ್ಯ ಸಫಲರಾಗಿದ್ದಾರೆ. ಅವರು ಈ ಉದ್ಯೋಗದಿಂದ ಹೊರಬಂದು ಹಲವು ವರ್ಷಗಳು ಕಳೆದಿದ್ದರೂ, ಅಲ್ಲಿಂದ ಮುಂದೆ ಇಲ್ಲಿನವರೆಗೂ ಆಗಿರುವ ಬೆಳವಣಿಗೆಗಳನ್ನು ಹಡಗಿನಾಚೆಯೇ ಕುಳಿತು ಗ್ರಹಿಸಿ ನಮಗೆ ಅತೀ ತಾಜಾ ಮಾಹಿತಿಗಳನ್ನು ಒದಗಿಸಿದ್ದಾರೆ. ಇನ್ನು ಇಡೀ ಗ್ರಂಥಕ್ಕೆ ಪೂರಕವಾಗಿ ಅವಶ್ಯಕ ಚಿತ್ರಗಳನ್ನೂ ಒದಗಿಸಿದ್ದಾರೆ. ಎಲ್ಲ 109 ಅಧ್ಯಾಯಗಳಿಗೂ ಕೊಟ್ಟಿರುವ ಶೀರ್ಷಿಕೆಗಳು ಮನಸೆಳೆಯುತ್ತವೆ ಹಾಗೂ ಸೂಕ್ತವಾಗಿವೆ. ಹಲವು ಉದಾಹರಣೆಗಳು: ಬಕಾಸುರನ ಬಂಡಿ ಎಂಬ ಶೀರ್ಷಿಕೆ 1–2ಯ ಅಧ್ಯಾಯ ಹಡಗಿನಲ್ಲಿ ಇರುವ ಆಹಾರ ಸರಬರಾಜಿನ ವಿಪುಲತೆಯನ್ನು ಸೂಚಿಸಿದರೆ, ಅಂಸರಂಡಂ ರೇಡಿಯೋ ಉತ್ತರಿಸುತ್ತಿಲ್ಲ ಎಂಬ ಅಧ್ಯಾಯದಲ್ಲಿ, ಸ್ನೇಹಿತನೊಬ್ಬ ಆಮ್‌ಸ್ಟರ್ ಡ್ಯಾಂ ರೇಡಿಯೋ ಎನ್ನುವ ಬದಲು ಅಂಸರಂಡಂ ರೇಡಿಯೋ ಎಂದು ಬಳಸಿ ಪರೀಕ್ಷೆ ಫೇಲಾದ ಪ್ರಸಂಗವನ್ನು ವಿವರಿಸುತ್ತದೆ.

ಮೈಸೂರಿನ ಭಾರತೀ ಪ್ರಕಾಶನ ಕೃತಿಯನ್ನು ಸುಂದರವಾಗಿ, ತಪ್ಪಿಲ್ಲದೇ ಹೊರತಂದಿದೆ. ಈ "ಸಾಗರದಲೆಗಳ ಮೇಲೆ" ಗ್ರಂಥ, ನಿಮ್ಮ ಹಾಗೂ ನಿಮ್ಮ ಕುಟುಂಬದವರ ಓದಿಗೆ ದೊರಕಿ ನಿಮ್ಮ ಗ್ರಂಥಾಲಯದಲ್ಲಿ ಪ್ರಮುಖ ಸ್ಥಾನ ಪಡೆಯಲಿ. ●

---

***ಸಂಪಾದಕೀಯ...*** ***(ಪುಟ 3ರಿಂದ)***

ಮಕ್ಕಳಂತೆ ಸರಿಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲಿ ದುಡಿಯುವುದರಿಂದ ಆ ಭಾವನೆ ಸ್ವಲ್ಪಮಟ್ಟಿಗೆ ತೆರೆಗೆ ಸರಿದಿದೆ. ಹೆಣ್ಣುಮಕ್ಕಳಂತೆ, ಗಂಡು ಮಕ್ಕಳಿಗೂ ಮನೆಯ ಎಲ್ಲ ಕೆಲಸಗಳನ್ನು ಕಲಿಯುವಂತೆ ಪ್ರೇರೇಪಿಸಬೇಕು. ಮನೆಯ ಕೆಲಸ ಮಾಡುವುದರಲ್ಲಿ ಯಾರೂ ಹೆಚ್ಚು ಅಲ್ಲ ಯಾರೂ ಕಡಿಮೆಯೂ ಅಲ್ಲ. ಎಲ್ಲರೂ ಸಮಾನರೂ, ಹಾಗೆ ಎಲ್ಲರ ಕರ್ತವ್ಯ ಕೂಡ ಎಂಬ ಭಾವನೆ ಮೂಡುವಂತೆ ನೋಡಿಕೊಳ್ಳಬೇಕು. ಭಾರತದ ಮೊದಲ ಮಹಿಳಾ ಶಿಕ್ಷಕಿ, ಹೆಣ್ಣು ಮಕ್ಕಳಿಗಾಗಿ ವಿದ್ಯೆ ಕಲಿತು, ಹೆಣ್ಣು ಮಕ್ಕಳ ಪಾಲಿಗೆ ಮಹಾನ್ ತಾಯಿ ಸಾವಿತ್ರಿ ಬಾಯಿ ಫುಲೆ ಅವರ ಜೀವನ ನಮಗೆಲ್ಲರಿಗೂ ಮಾರ್ಗದರ್ಶಕ. ಇಂತಹವರ ಸಾಹಸಗಾಥೆಯನ್ನು ಮಕ್ಕಳು ಓದುವಂತೆ ಪ್ರೇರೇಪಿಸಬೇಕು. ಇವೆಲ್ಲ ಸುಂದರ ಬದುಕು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ. ●

# ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ : ಶತಾವಧಾನಿ ಡಾ. ಆರ್. ಗಣೇಶ್ ಅವರಿಂದ ವಿಶೇಷ ಉಪನ್ಯಾಸ, ಕೃತಿ ಬಿಡುಗಡೆ ಕಾರ್ಯಕ್ರಮ

## ಅನುಭವದಲ್ಲಿ ಹೊಸತನ ತಂದುಕೊಡುವುದು ಅಭಿಜಾತ ಸಾಹಿತ್ಯದ ಮುಖ್ಯ ಲಕ್ಷಣ – ಶತಾವಧಾನಿ ಡಾ. ಆರ್. ಗಣೇಶ್



ಒಂದು ದೇಶದ ಸಂಸ್ಕೃತಿಯ ದಾರ್ಢ್ಯವನ್ನು ಅರಿಯಬೇಕಾದರೆ ಅಲ್ಲಿಯ ಅಭಿಜಾತ ಸಾಹಿತ್ಯ ಎಷ್ಟರ ಮಟ್ಟಿಗೆ ನೆಲೆಯೂರಿದೆ ಎಂದು ನೋಡಬೇಕಾಗುತ್ತದೆ. ಅಭಿಜಾತ ಸಾಹಿತ್ಯವನ್ನು ಆಧುನಿಕ ದೇಶಗಳು ಕೂಡ ಕಾಪಾಡಿಕೊಂಡು ಬಂದಿವೆ. ಅದು ಜನಜೀವನದಲ್ಲಿ ಒಂದು ಮಟ್ಟದಲ್ಲಿ ಹಾಸುಹೊಕ್ಕಾಗಿದೆ. ಅಭಿಜಾತ ಕೃತಿಯ ಲಕ್ಷಣ ಏನೆಂದರೆ ಅದು ಹೇಳಬೇಕಾದುದನ್ನು ಎಂದೂ ಹೇಳಿ ಮುಗಿಸಿರುವುದಿಲ್ಲ. ಅನುಭವದಲ್ಲಿ ಹೊಸತನ್ನು ತಂದುಕೊಡುವುದು ಅಭಿಜಾತ ಸಾಹಿತ್ಯದ ಮುಖ್ಯ ಲಕ್ಷಣ. ಒಂದು ಕೃತಿಗೆ ಕಾಲಪ್ರತಿಷ್ಠೆ ಬೇಕು; ಅದು ಬಂದರೆ ಆ ಕೃತಿಗೆ ಆದರ ಬರುವುದು.

ಅಭಿಜಾತ ಸಾಹಿತ್ಯ ಅನಾಥ ಪ್ರಜ್ಞೆಯನ್ನು ದೂರಗೊಳಿಸುತ್ತದೆ. ಅದು ನಿತ್ಯ ಸಾಹಚರ್ಯದಲ್ಲಿ ಇರುವಂಥದ್ದು. ಮಾನವ ಸ್ವಭಾವ ಕಾಲಾತೀತವಾಗಿ ಹೇಗೆ ಇರುತ್ತದೆ ಎನ್ನುವುದನ್ನು ಅಭಿಜಾತ ಸಾಹಿತ್ಯ ತಿಳಿಸುತ್ತದೆ. ಮಾನವರಲ್ಲಿ ಅನಿರೀಕ್ಷಿತವಾದದ್ದು ಇಲ್ಲ; ಎಲ್ಲವೂ ನಿರೀಕ್ಷಿತವೇ ಎನ್ನುವುದನ್ನು ಅಭಿಜಾತ ಸಾಹಿತ್ಯ ಹೇಳಿಕೊಡುತ್ತದೆ. ಅಭಿಜಾತ ಕೃತಿಗಳ ಮಗ್ನತೆ ಎಂದಿಗೂ ನಮ್ಮನ್ನು ಉಳಿಸುತ್ತದೆ. ಆ ಸಾಹಿತ್ಯವು ಸ್ವಲ್ಪವೂ ಕೊರತೆ ಇಲ್ಲದಂತೆ, ಖರ್ಚಿಲ್ಲದ ಆನಂದವನ್ನು ಕೊಡುವಂಥದ್ದು. ಅದೊಂದು ಕಣ್ಣಿಗೆ ಕಾಣದ ದೀಪ. ಅಭಿಜಾತ ಕೃತಿಗಳ ಮಹತ್ವವನ್ನು, ಅವುಗಳ ವಸ್ತು ವಿಷಯ ಪಾತ್ರ ಕತೆಗಳ ಮೂಲಕ ವಿಶ್ಲೇಷಿಸುವುದು ಮುಖ್ಯವಾಗುತ್ತದೆ ಎಂದು ಖ್ಯಾತ ಬಹುಶ್ರುತ ವಿದ್ವಾಂಸರೂ, 2026ರ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರೂ ಆದ ಶತಾವಧಾನಿ ಡಾ. ಆರ್. ಗಣೇಶ್ ನುಡಿದರು.

ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನವು ಸ್ಥಾಪಿತವಾಗಿ 125 ವರ್ಷಗಳು ಸಂದಿರುವ ಸಂಭ್ರಮದಲ್ಲಿ ಕನ್ನಡ ವಿಭಾಗವು ಫೆ. 6ರಂದು ಕವಿ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಪಾಲ್ಗೊಂಡು 'ಅಭಿಜಾತ ಸಾಹಿತ್ಯದ ಆವಶ್ಯಕತೆ' ಎಂಬ ವಿಷಯದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥರೂ, ಪ್ರಾಧ್ಯಾಪಕರೂ ಆದ ಪ್ರೊ. ಜಿ. ಎನ್. ಉಪಾಧ್ಯ ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ 1901ರಲ್ಲಿ ಕನ್ನಡ ಅಧ್ಯಯನಕ್ಕೆ ನಾಂದಿ ಹಾಡಲಾಯಿತು. ವಿಶ್ವವಿದ್ಯಾಲಯವು 125 ವರ್ಷಗಳಲ್ಲಿ ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಗೆ ಮಹತ್ವದ ದೇಣಿಗೆಯನ್ನು ಕೊಟ್ಟಿದೆ. ಇಲ್ಲಿಯ ಐವತ್ತಾರಕ್ಕಿಂತಲೂ ಹೆಚ್ಚು ಶೈಕ್ಷಣಿಕ ವಿಭಾಗಗಳಿಗೆ ಸರಿದೊರೆಯಾಗಿ ಕನ್ನಡ ವಿಭಾಗವು ಕೆಲಸ ಮಾಡುತ್ತಿದೆ. ಶ್ಯಾಮರಾವ್ ವಿಠ್ಠಲ ಕೈಕಿಣಿ, ರಾ. ಹ. ದೇಶಪಾಂಡೆ ಇವರಿಬ್ಬರು ಮುಂಬೈ ವಿಶ್ವವಿದ್ಯಾಲಯದಲ್ಲಿ ಬಹಳ ಪ್ರಯಾಸಪಟ್ಟು ಕನ್ನಡವನ್ನು ಸ್ಥಾಪಿಸಿ ಮುಂಬೈ ಪ್ರಾಂತ್ಯದಲ್ಲಿ ಕನ್ನಡ ಬೆಳಗುವಂತೆ ನೋಡಿಕೊಂಡರು. ಆ ಬಳಿಕ ಅನೇಕ ಸಂಘ ಸಂಸ್ಥೆಗಳು ಕನ್ನಡದ ಕೈಂಕರ್ಯವನ್ನು ಮಾಡಿದವು. ವರ್ತಮಾನದ ಅರಿವಿಗೆ ಪೂರ್ವಸ್ಮೃತಿ ಯಾವತ್ತೂ ಬೇಕು. ಕನ್ನಡದಲ್ಲಿ ಇರುವ ಏಕೈಕ ಶತಾವಧಾನಿಗಳಾದ ಡಾ. ಆರ್. ಗಣೇಶ್ ಅವರು ಎಂಟು ಭಾಷೆಗಳಲ್ಲಿ ಅಷ್ಟಾವಧಾನ ಮಾಡಿ ಬೆರಗು ಮೂಡಿಸಿದವರು. ಅವರು ವಿದ್ವಲ್ಲೋಕದ ವಿಸ್ಮಯ. ಅವರಿಂದ ಉಪನ್ಯಾಸ ನೀಡಲು ಬಂದಿರುವುದು ನಮ್ಮೆಲ್ಲರ ಭಾಗ್ಯ ಎಂದು ಸಂತಸ ವ್ಯಕ್ತಪಡಿಸಿದರು.



ಇದೇ ಸಂದರ್ಭದಲ್ಲಿ ಡಾ. ಉಮಾ ರಾಮರಾವ್ ಅವರ ಪಿ.ಎಚ್.ಡಿ. ಮಹಾಪ್ರಬಂಧ 'ಬಹು ನೆಲೆಗಳ ಬೆರಗು' ಕೃತಿಯನ್ನು ಶತಾವಧಾನಿ ಡಾ. ಆರ್. ಗಣೇಶ್ ಅವರು ಬಿಡುಗಡೆಗೊಳಿಸಿದರು. ಡಾ. ಉಪಾಧ್ಯ ಅವರು ಆಶಯ ನುಡಿಗಳನ್ನಾಡಿ, ಉಮಾ ರಾಮರಾವ್ ಅವರೊಬ್ಬ ಸಾಧಕರು. ಅವರ ಪಿಎಚ್.ಡಿ. ಮಹಾಪ್ರಬಂಧವು

ಭೈರಪ್ಪನವ ರಾದಿಯಾಗಿ ಅನೇಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಪದ್ಮಭೂಷಣ ಡಾ. ಆರ್. ಗಣೇಶ್ ಅವರನ್ನು ಶಾಲು ಹೊದಿಸಿ ಕೃತಿ ಗೌರವ ನೀಡಲಾಯಿತು. ಶತಾವಧಾನಿಗಳನ್ನು ಸಭೆಗೆ ಪರಿಚಯಿಸಿದ ಡಾ. ಉಮಾ ರಾಮರಾವ್ ಅವರು ಶತಾವಧಾನಿಗಳು ತಮ್ಮ ಉಪನ್ಯಾಸವೇ ತಮ್ಮ ಪರಿಚಯವೆನ್ನುತ್ತಾರೆಂದು ಹೇಳಿ ಅವರ ಜ್ಞಾನ ದಾಹ, ಕಲಿಕೆಯಲ್ಲಿ ಅವರಿಗಿರುವ ಶ್ರದ್ಧೆ, ಅಧ್ಯಯನಶೀಲರನ್ನು ಅವರು ಪ್ರೋತ್ಸಾಹಿಸುವ ಬಗೆಗಳನ್ನು ವಿವರಿಸಿದರು. ಅವಧಾನ ಕಲೆಯ ಸಂಕ್ಷಿಪ್ತ ಪರಿಚಯವನ್ನು ಹೇಳಿ ಶತಾವಧಾನಿ ಎಂಬ ಬಿರುದಿನ ಅರ್ಥವನ್ನು ತಿಳಿಸಿದರು.

'ಬಹು ನೆಲೆಗಳ ಬೆರಗು' ಕೃತಿಯ ಲೇಖಕರಾದ ಉಮಾ ಅವರು ಮೇರು ಸಾಹಿತಿ ಡಾ. ಎಸ್. ಎಲ್. ಭೈರಪ್ಪನವರ ಸರಳ ಸ್ವಭಾವವನ್ನು ವಿವರಿಸುತ್ತಾ ಅವರ ಕಾದಂಬರಿಗಳಲ್ಲಿನ ಮೆಚ್ಚುವ ಮತ್ತು ಮೆಚ್ಚದ ಅಂಶಗಳನ್ನೆಲ್ಲ ಯಾವ ಹಿಂಜರಿಕೆಯೂ ಇಲ್ಲದೆಯೇ ಹೇಳುವ ಸ್ವಾತಂತ್ರ್ಯವನ್ನು ತಮಗೆ ಕೊಟ್ಟಿದ್ದರೆಂದು ಹೇಳಿದರು. ಕೃತಿಯೊಂದು ರಚಿತವಾಗುತ್ತಿರುವ ಹಂತದಲ್ಲಿ ಸಾಹಿತಿಯದಾಗಿರುತ್ತದೆ ಮತ್ತು ಒಮ್ಮೆ ಪ್ರಕಟವಾದ ನಂತರ ಓದುಗನದಾಗಿ ಬಿಡುತ್ತದೆ ಎಂಬ ನಿಲುವನ್ನು ಹೊಂದಿದ್ದ ಭೈರಪ್ಪನವರು ಅಧ್ಯಯನದಲ್ಲಿ ಎಲ್ಲಿಯೂ ಒಳಗೊಳ್ಳದಿದ್ದರೂ ಪ್ರಕಟವಾದ ಪುಸ್ತಕವನ್ನೋದಿ ಮೆಚ್ಚಿಕೊಂಡದ್ದು ತಮಗೆ ಸಮಾಧಾನವನ್ನು ತಂದಿತೆಂದು ಉಮಾ ಹೇಳಿದರು.

ತಮ್ಮ ಅಧ್ಯಯನದ ಸಂದರ್ಭದಲ್ಲಿ ಮಾರ್ಗದರ್ಶಕರಾದ ಡಾ. ಉಪಾಧ್ಯರ ಜೊತೆಯಲ್ಲಿ ತಮ್ಮನ್ನು ಮುನ್ನಡೆಸಿದ ಶತಾವಧಾನಿ ಡಾ. ಆರ್. ಗಣೇಶ್, ಪ್ರೊ. ಎಲ್. ವಿ. ಶಾಂತಕುಮಾರಿ ಮತ್ತು ಲಕ್ಷ್ಮೀಶ ತೋಳ್ಪಾಡಿಯವರನ್ನು ಉಮಾ ಕೃತಜ್ಞತೆಯಿಂದ ನೆನೆದರು.

ಅಂದು ಬಿಡುಗಡೆಗೊಂಡ ಕೃತಿಯ ಪರಿಚಯವನ್ನು ಮಾಡುತ್ತಾ, ವಿಭಾಗದ ಹಿರಿಯ ವಿದ್ಯಾರ್ಥಿ ವಿದ್ಯಾ ರಾಮಕೃಷ್ಣ ಅವರು ಅತ್ಯಂತ ವಾಚನೀಯವೂ ಸೃಜನಾತ್ಮಕವೂ ಆಗಿ ಮೂಡಿ ಬಂದಿರುವ ಈ ಕೃತಿಯಲ್ಲಿ ಭೈರಪ್ಪನವರ ಪರ್ವ, ಉತ್ತರಕಾಂಡಗಳ ಓದಿನಿಂದ ಕೆಲವೊಮ್ಮೆ ದಕ್ಕದೇ ಹೋಗಬಹುದಾದ ಒಂದು ಸಮಗ್ರ ದೃಷ್ಟಿಕೋನವು ದೊರೆಯುತ್ತದೆ ಎಂದರು.

ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ನಿರೂಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಉಪನ್ಯಾಸಕರೊಂದಿಗೆ ಸಂವಾದ ಕಾರ್ಯಕ್ರಮವು ನಡೆಯಿತು. ಸಂವಾದದಲ್ಲಿ ಕಲಾ ಭಾಗ್ವತ್, ವಿಕ್ರಮ್ ಜೋಶಿ, ಡಾ. ಜಿ. ಎನ್. ಉಪಾಧ್ಯ, ನಾರಾಯಣ ನವಿಲೇಕರ್, ಅಮಿತಾ ಭಾಗ್ವತ್, ಉಮಾ ರಾಮರಾವ್ ಮೊದಲಾದವರು ಪಾಲ್ಗೊಂಡರು. ವಿಭಾಗದ ವಿದ್ಯಾರ್ಥಿಗಳು, ನಗರದ ಕನ್ನಡ ಸಾಹಿತ್ಯಾಸಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

**.....ಇತ್ತೀಚಿನ ಬೆಳವಣಿಗೆಗಳು ರಾಷ್ಟ್ರೀಯ ವಿಚಾರ ಸಂಕಿರಣ**

ಇವುಗಳ ನಡುವಿನ ನಂಟಿಗೆ ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವಿದೆ.ಮರಾಠಿ ಸಂತ ಕವಿಗಳು ಕನ್ನಡದ ಬಗೆಗೆ ತೋರಿದ ಆದರ ಗೌರವ ವಿಶೇಷವಾದುದು. ಮರಾಠಿ ರಂಗಭೂಮಿಯ ಹುಟ್ಟಿಗೆ ಕನ್ನಡಿಗರು ಕಾರಣಕರ್ತರಾಗಿದ್ದಾರೆ. ಆ ಬಳಿಕ ಮರಾಠಿಯ ಪ್ರಭಾವ ಕನ್ನಡ ರಂಗಭೂಮಿ ಮೇಲೂ ಆಗಿದೆ. ಶತಮಾನದ ಸಂಭ್ರಮದಲ್ಲಿರುವ ಮೈಸೂರು ಅಸೋಸಿಯೇಷನ್ ಶ್ರೀರಂಗ ಸಂಸ್ಮರಣೆ ನಾಟಕೋತ್ಸವವನ್ನು ಅನೇಕ ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಈ ಬಾರಿ ಕರ್ನಾಟಕ ನಾಟಕ ಅಕಾಡೆಮಿ ಈ ಉತ್ಸವದಲ್ಲಿ ಕೈಜೋಡಿಸಿದ್ದು ಸಂತೋಷದ ಸಂಗತಿ. ಶ್ರೀರಂಗ ಅವರು ಭಾರತೀಯ ರಂಗಭೂಮಿಯಲ್ಲಿ ಬೆಳಗಿದ ಮಹಾನ್ ಚೇತನ. ಅವರು ಕಟ್ಟಿಕೊಟ್ಟ ರಂಗ ಮೀಮಾಂಸೆ ಇವತ್ತಿಗೂ ಪ್ರಸ್ತುತವಾಗಿದೆ. ಅವರು ರಚಿಸಿದ ಭಾರತೀಯ ರಂಗಭೂಮಿ ಕೃತಿಯನ್ನು ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ ನಾಲ್ಕು ದಶಕಗಳ ಹಿಂದೆಯೇ ಪ್ರಕಟಿಸಿ ಗೌರವಿಸಿತ್ತು. ಈಗ ಕರ್ನಾಟಕ ನಾಟಕ ಅಕಾಡೆಮಿ ಕನ್ನಡ ಮರಾಠಿ ರಂಗಭೂಮಿಯ ಇತ್ತೀಚಿನ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವುದು ಔಚಿತ್ಯ ಪೂರ್ಣ ಉಪಕ್ರಮ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ನಾಗರಾಜ ಮೂರ್ತಿ ಅವರ ದೂರದೃಷ್ಟಿ ಕ್ರಿಯಾಶೀಲತೆ ಮೆಚ್ಚುವಂಥದ್ದು ಎಂಬುದಾಗಿ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಜಿ. ಎನ್. ಉಪಾಧ್ಯ ತಮ್ಮ ಆಶಯ ನುಡಿಗಳನ್ನು ವ್ಯಕ್ತಪಡಿಸಿದರು.

ಹಿರಿಯ ರಂಗತಜ್ಞ, ನಾಟಕಕಾರರಾದ ಡಾ. ಮಂಜುನಾಥ್ ಅವರು ಮಾತನಾಡುತ್ತಾ ಸಿನೆಮಾ ಬಂದ ಮೇಲೆ ರಂಗಭೂಮಿಯ ಮೇಲೆ ಆಸಕ್ತಿ ಕಡಿಮೆಯಾಯಿತು. ಆದರೂ ರಂಗಭೂಮಿಯವರು ತಮ್ಮತನವನ್ನು ಬಿಟ್ಟುಕೊಡಲಿಲ್ಲ. ನಾಟಕ ಅಂದರೆ ಸಂಗೀತಮಯವಾಗಿರಬೇಕು ಎಂದು ಅಭಿಪ್ರಾಯ ಪಟ್ಟರು. ಮರಾಠಿ ರಂಗಭೂಮಿಯ ವೈಶಿಷ್ಟ್ಯದ ಕುರಿತು ಭನಟ್ಟಿ ಅವರು ವಿಶ್ಲೇಷಿಸಿದರು.

ಅಧ್ಯಕ್ಷತೆ ವಹಿಸಿದ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ನಾಗರಾಜ ಅವರು ತಮ್ಮ ಅಧ್ಯಕ್ಷೀಯ ಮಾತಿನಲ್ಲಿ ರಂಗಭೂಮಿಯ ಇತ್ತೀಚಿನ ಬೆಳವಣಿಗೆಗಳ ಕುರಿತು ಬೆಳಕು ಚೆಲ್ಲಿದರು.

ಮೂರು ನಾಲ್ಕು ದಶಕಗಳಲ್ಲಿ ಪ್ರಯೋಗಗಳ ದೃಷ್ಟಿಯಿಂದ ಶ್ರೇಷ್ಠವಾದ ಕೃತಿಗಳನ್ನು ಕೊಟ್ಟಿರುವುದು ಕನ್ನಡ ರಂಗಭೂಮಿ. ಜನಪ್ರಿಯ ರಂಗಭೂಮಿ ಮತ್ತು ವಸ್ತುನಿಷ್ಠ ರಂಗಭೂಮಿ ಬೇರೆ ಬೇರೆಯಾಗಿವೆ . ಶ್ರೀರಂಗರ ನಾಟಕಗಳನ್ನು ಬಿಟ್ಟು ರಂಗಭೂಮಿಯ ಅಧ್ಯಯನ ಅಪೂರ್ಣವಾಗುತ್ತದೆ.ಅದೇ ರೀತಿ ಲಂಕೇಶ, ಕಾರ್ನಾಡ್, ಶಿವಪ್ರಕಾಶ್ ಅವರ ಕೊಡುಗೆಯೂ ಮಹತ್ವದ್ದು ಎಂದರು.

ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾದ ಜಗದೀಶ್ ಜಾಲ ಅವರು ಕಾರ್ಯಕ್ರಮ ನಿರೂಪಿಸಿ, ಇದೇ ಸಂದರ್ಭದಲ್ಲಿ ಪ್ರಯೋಗ ರಂಗ ಬೆಂಗಳೂರು ಇದರ ಸದಸ್ಯರು ವಿವಿಧ ರಂಗಗೀತೆಗಳನ್ನು ಹಾಡಿ ರಂಜಿಸಿದರು. ಮೈಸೂರು ಅಸೋಸಿಯೇಷನ್ ಉಪಾಧ್ಯಕ್ಷರಾದ ಮಾಸ್ಕೇರಿ ಅವರು ಸ್ವಾಗತಿಸಿದರು. ಮೈಸೂರು ಅಸೋಸಿಯೇಷನ್ ಟ್ರಸ್ಟಿ ಮಂಜುನಾಥಯ್ಯ, ನಾಡಿನ ಹಿರಿಯ ಸಾಹಿತಿ ಆನಂದ ಜಂಜರವಾಡ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ, ಡಾ. ಉಮಾ ರಾಮರಾವ್, ಕನ್ನಡ ವಿಭಾಗದ ಸಂಶೋಧನ ವಿದ್ಯಾರ್ಥಿಗಳು ಮೊದಲಾದವರು ಆನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಾರಾಯಣ ನವಿಲೇಕರ್ ಅವರು ಧನ್ಯವಾದ ಸಮರ್ಪಿಸಿದರು

ಮೈಸೂರು ಅಸೋಸಿಯೇಷನ್, ಮುಂಬಯಿ
The Mysore Association, Bombay
Centenary Year (1926 - 2026)

# ಶತಮಾನೋತ್ಸವದ ಕಡೆಯ ಕಾರ್ಯಕ್ರಮ

ಮೈಸೂರು ಅಸೋಸಿಯೇಷನ್, ತನ್ನ ಶತಮಾನೋತ್ಸವವನ್ನು ಇಡೀ ವರ್ಷ ತುಂಬಿದ ಕಾರ್ಯಕ್ರಮಗಳನ್ನು ನಡೆಸಿದೆ. ಇದರಲ್ಲಿ ನಾಟಕ, ನೃತ್ಯ, ಸಂಗೀತ ಹಾಗೂ ಸಾಹಿತ್ಯದ ಕಾರ್ಯಕ್ರಮಗಳು ಮನರಂಜಿಸಿವೆ.

ಈಗ ನೂರ ಒಂದನೆಯ ವರ್ಷದ ಮೆಟ್ಟಲನ್ನು ಹತ್ತಿರುವ ಅಸೋಸಿಯೇಷನ್, ಏಪ್ರಿಲ್ 19, 2026 ಹಾಗೂ ಏಪ್ರಿಲ್ 26, 2026 ರಂದು ಕಡೆಯ ಕಾರ್ಯಕ್ರಮಗಳನ್ನು ಜರುಗಿಸುತ್ತಿದೆ.

ಏಪ್ರಿಲ್ 19, 2026 ರಂದು ಮಧ್ಯಾಹ್ನ 2.00 ಘಂಟೆಗೆ ಬೆಂಗಳೂರಿನಲ್ಲಿರುವ ನಮ್ಮ ಸದಸ್ಯರು, ಶ್ರೀಮತಿ ರಮಾ ವೆಂಕಟೇಶ್ ಅವರ ನೇತೃತ್ವದಲ್ಲಿ ಒಂದು ಸಂಗೀತ ನಾಟಕ ರೂಪಕವನ್ನು ನಮ್ಮ ಮುಂದಿಡುತ್ತಿದ್ದಾರೆ. ಎರಡು ತಿಂಗಳು ಸತತ ಅಭ್ಯಾಸ ಮಾಡಿ ಸುಮಾರು 18 ಮಂದಿ ಕಲಾವಿದರು ಈ ರೂಪಕವನ್ನು ಅಣಿ ಮಾಡುತ್ತಿದ್ದಾರೆ.

ಅದರ ಮೇಲೆ 3.00 ಘಂಟೆಗೆ ಶ್ರೀ. ರಾಘವೇಂದ್ರ ಆಚಾರ್ಯರವರು ಒಂದು ಅಣಕ –ನಗೆ (Standup Comedy) ರೂಪಕವನ್ನು ಮುಂದಿಡುತ್ತಾರೆ. ಹೆಸರಾಂತ ಆಚಾರ್ಯರವರ ಹಿಂಬಾಲಕರು ಕರ್ನಾಟಕದಾದ್ಯಂತ ಅವರ ಕಾರ್ಯಕ್ರಮಗಳಲ್ಲಿ ತುಂಬಿರುತ್ತಾರೆ. ಅಂತಹ ಕಲಾವಿದರು ನಮ್ಮಲ್ಲಿಗೆ ಬರುತ್ತಿರುವುದು ನಮ್ಮ ಭಾಗ್ಯ.

ತಿಂಡಿ–ತಿನಿಸುಗಳ ನಂತರ ನಮ್ಮ ಸಿದ್ಧಿವಿನಾಯಕನ ಪೂಜೆ. ಸಿದ್ಧಿವಿನಾಯಕನನ್ನು ನಮ್ಮಲ್ಲಿ ಸ್ಥಾಪಿಸಿ 31 ವರ್ಷವಾಗಿದೆ. ಏಕೆಂದರೆ ಏಪ್ರಿಲ್ 19ರಂದು ಅಕ್ಷಯ ತೃತೀಯ. ನಮಗೆ ಈ ಗಣೇಶ ಕುಳಿತು, ಅನೇಕ ಭಾಗ್ಯಗಳನ್ನು ಇತ್ತಿದ್ದಾನೆ. ಅವನನ್ನು ಸ್ಮರಿಸಿ ಪೂಜೆ.

ಈ ಪೂಜೆಯಲ್ಲಿ ಮೈಸೂರಿನ ಅರಸು ಮನೆತನದವರು ಹಾಗೆಯೇ ಮಹಾರಾಷ್ಟ್ರದ ಮುಖ್ಯಸ್ಥರು ಸೇರಲಿದ್ದಾರೆ. ಸಂಜೆ 6.30ರಿಂದ 8.00ರ ವರೆಗೆ ಸಭಾ ಕಾರ್ಯಕ್ರಮ. ಆಮೇಲೆ ಸಂಗೀತಾರಾಧನೆ. ಈ ಕಲಾವಿದರು ಯಾರೆಂದು ತಿಳಿಯಲು ತಮ್ಮಗಳನ್ನು ಕುತೂಹಲದಲ್ಲಿಡುತ್ತೇವೆ. ಏಕೆಂದರೆ ಭಾಗ್ಯಗಳು ಮುಂಚೆಯೇ ಗೊತ್ತಾದರೆ ಆಗ ಕುತೂಹಲ ಕಡಿಮೆಯಾಗುತ್ತದೆ.

ತಾವೆಲ್ಲ ಸದಸ್ಯರು ಏಪ್ರಿಲ್ 19 ರಂದು ನಮ್ಮಲ್ಲಿಗೆ ಬಂದೇ ತೀರಬೇಕು. ಇದು ನಮ್ಮ ಸಿದ್ಧಿವಿನಾಯಕ ಅಣತಿ!!

ಏಪ್ರಿಲ್ 16, 2026 ರಂದು ಸಂಜೆ ರಾಜರಾಜೇಶ್ವರಿ ಭರತನಾಟ್ಯ ವೃಂದದವರು, ನಮ್ಮ ಶತಮಾನೋತ್ಸವದ ಕಡೆಯ ನೃತ್ಯ ಕಾರ್ಯಕ್ರಮದೊಂದಿಗೆ ಮುಗಿಸುತ್ತಿದ್ದಾರೆ. ಅನೇಕ ದಾಸರ ಪದಗಳಿಗೆ ನೃತ್ಯವನ್ನು ಅಳವಡಿಸಿರುವ ಈ ಕಾರ್ಯಕ್ರಮ ಅಪರೂಪದ್ದು. ನೀವಿದನ್ನು ಕಳೆದುಕೊಳ್ಳಬೇಡಿ.

ಮುಂದೆ ನಿಮ್ಮನ್ನು ಎದಿರುಗೊಳ್ಳಲು ನಾವು ಬಯಸುತ್ತಿದ್ದೇವೆ.

## ಮೈಸೂರು ಅಸೋಸಿಯೇಷನ್, ಮುಂಬಯಿ

**ಗುರುವಾರ, ಮಾರ್ಚ್ 26, 2026**

**ಸಂಜೆ 5.30ಕ್ಕೆ**

# ರಾಮ ನವಮಿ ಪೂಜೆ



**ಭಜನೆ ಹಾಗೂ ಪ್ರಸಾದ ವಿನಿಯೋಗ**

ಸ್ಥಳ:
ಮೈಸೂರು ಅಸೋಸಿಯೇಷನ್, ಮುಂಬೈ
393, ಭಾವು ದಾಜಿ ರಸ್ತೆ, ಮಾಟುಂಗ (ಪೂ), ಮುಂಬೈ – 400 019

**ಎಲ್ಲರಿಗೂ ನಲು ಬರುವು**

ಮುಂಬರುವ ಕಾರ್ಯಕ್ರಮಗಳು

## ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಮುಂಬಯಿ

ಇವರ ಸಂಯುಕ್ತ ಆಶ್ರಯದಲ್ಲಿ

## ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದದತ್ತಿ ಉಪನ್ಯಾಸ ಕಾರ್ಯಕ್ರಮ - 2026

| | | |
|---|---|---|
| ಉಪನ್ಯಾಸಕರು | : | ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ (ಹಿರಿಯ ವಿದ್ವಾಂಸರು, ಖ್ಯಾತ ಸಂಶೋಧಕರು) |
| ಉಪನ್ಯಾಸ–1 | : | ಪುರಂದರ ದಾಸರ ಇನ್ನೊಂದು ಮುಖ |
| ದಿನಾಂಕ ಮತ್ತು ಸಮಯ | : | ಶನಿವಾರ 14.03.2026 ಸಂಜೆ 5ರಿಂದ |
| ಉಪನ್ಯಾಸ–2 | : | ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ – ಒಂದು ತೌಲನಿಕ ಜಿಜ್ಞಾಸೆ |
| ದಿನಾಂಕ ಮತ್ತು ಸಮಯ | : | ರವಿವಾರ 15.03.2026 ಬೆಳಿಗ್ಗೆ 11.00 ರಿಂದ |


**ಸ್ಥಳ :** ಮೈಸೂರು ಅಸೋಸಿಯೇಶನ್ ಸಭಾಗೃಹ, 393 ಭಾವುದಾಜಿ ರಸ್ತೆ, ಮಾತುಂಗ, ಮುಂಬಯಿ

**ತಮಗೆಲ್ಲರಿಗೂ ಹಾರ್ದಿಕ ಸ್ವಾಗತ**

ಡಾ. ಜಿ. ಎನ್. ಉಪಾಧ್ಯ
ಹಿರಿಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ – 400 098

ಡಾ. ಗಣಪತಿ ಶಂಕರಲಿಂಗ
ಗೌ. ಕಾರ್ಯದರ್ಶಿ
ಮೈಸೂರು ಅಸೋಸಿಯೇಷನ್, ಮಾಟುಂಗ, ಮುಂಬಯಿ – 400 019

## ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆ



ಮೈಸೂರು ಅಸೋಸಿಯೇಷನ್ ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದುಕೊಂಡು ಬರುತ್ತಿರುವ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆಗೆ ಸುದೀರ್ಘವಾದ ಇತಿಹಾಸವಿದೆ.

ನಾಡಿನ ನಾಮಾಂಕಿತ ಸಾಹಿತಿಗಳು, ವಿದ್ವಾಂಸರು, ಕಲಾವಿದರು, ಚಿಂತಕರು, ಲೇಖಕರು ಈ ಮಾಲಿಕೆಯಲ್ಲಿ ಉಪನ್ಯಾಸ ನೀಡಿದ್ದಾರೆಂಬುದು ಉಲ್ಲೇಖನೀಯ ಅಂಶ. ಇಲ್ಲಿ ನೀಡಲಾದ ಉಪನ್ಯಾಸಗಳು ಕೃತಿ ರೂಪದಲ್ಲಿ ಬೇರೆ ಬೇರೆ ಅಭಿನಂದನ ಗ್ರಂಥ, ಸಂಶೋಧನ ಗ್ರಂಥಗಳಲ್ಲೂ ಬೆಳಕು ಕಂಡಿವೆ.

ಖ್ಯಾತ ಸಾಹಿತಿ ಡಾ. ಶಿವರಾಮ ಕಾರಂತ, ಕುರ್ತುಕೋಟಿ, ಕಂಬಾರ, ಜಿ. ಎಸ್. ಎಸ್., ಜಯಂತ ಕಾಯ್ಕಿಣಿ, ಜಸ್ಟೀಸ್ ಬಿ. ಎನ್. ಶ್ರೀಕೃಷ್ಣ, ಡಾ. ಟಿ. ಎಸ್. ಸತ್ಯವತಿ, ಡಾ. ಪ್ರಭಾಕರ ಜೋಶಿ ಅವರವರೆಗೆ ಈ ಮಾಲಿಕೆ ನಡೆದು ಬಂದಿದೆ. ನಾಲ್ಕು ದಶಕಗಳ ಹಿನ್ನೆಲೆಯಿರುವ ಈ ದತ್ತಿ ಮಾಲಿಕೆ ಮುಂಬಯಿ ವಿಶ್ವವಿದ್ಯಾಲಯದ ಹಳೆಯ ಕೆಲವೇ ಕೆಲವು ದತ್ತಿ ನಿಧಿಗಳಲ್ಲಿ ಒಂದಾಗಿದೆ ಎಂಬುದು ಹೆಮ್ಮೆಯ ಸಂಗತಿ. ಮೈಸೂರು ಅಸೋಸಿಯೇಷನ್ ಕಾಲಕಾಲಕ್ಕೆ ಈ ದತ್ತಿ ನಿಧಿಗೆ ದೇಣಿಗೆಯನ್ನೂ ನೀಡುತ್ತಾ ಬಂದಿದೆ. ಪ್ರತೀವರ್ಷ ಎರಡು ದಿನಗಳ ಕಾಲ ನಡೆಯುವ ಈ ಉಪನ್ಯಾಸ ಕಾರ್ಯಕ್ರಮ ಮುಂಬಯಿ ಕನ್ನಡಿಗರ ಗಮನ ಸೆಳೆದಿದೆ. ಈ ಬಾರಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಉಪನ್ಯಾಸವನ್ನು ನೀಡಲಿದ್ದಾರೆ.

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ: ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ವಿಜಯಪುರದ ಕನ್ನಡ ಇತಿಹಾಸಕಾರರು, ಅವರು ದಾಸ ಸಾಹಿತ್ಯದ ಕುರಿತು ವ್ಯಾಪಕ ಸಂಶೋಧನೆಯನ್ನು ಮಾಡಿರುತ್ತಾರೆ. 50ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕನಿಷ್ಠ 14 ಪುಸ್ತಕಗಳು ದಾಸ ಸಾಹಿತ್ಯದ ಕುರಿತಾಗಿವೆ. ದಾಸ ಸಾಹಿತ್ಯದ ಕುರಿತಾದ ಅವರ ಸಂಶೋಧನೆಗೆ ಮನ್ನಣೆಯಾಗಿ ಅವರು ಕನಕಶ್ರೀ ಪ್ರಶಸ್ತಿಯನ್ನು ಪಡೆದಿದ್ದಾರೆ. 2021 ರಲ್ಲಿ, ಅವರಿಗೆ ಸಾಹಿತ್ಯ ವಿಭಾಗದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿರುವರು. ಅವರು ವಿಜಯಪುರದ ಡಾ. ಪಿ. ಜಿ. ಹಳಕಟ್ಟಿ ಸಂಶೋಧನ ಕೇಂದ್ರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

**ಮಾರ್ಚ್ 28, 2026 ರಂದು ಸಂಜೆ 5.00 ರಿಂದ**

## ಕವಿಗೋಷ್ಠಿ

**ಶತಮಾನೋತ್ಸವದ ಪ್ರಯುಕ್ತ ನಡೆಸಲಾದ ನಾಟಕ ರಚನೆ, ಸಣ್ಣ ಕಥೆ ಹಾಗೂ ಶಿಶು ಕವನ ಸ್ಪರ್ಧೆಗಳ**

**ಬಹುಮಾನ ವಿತರಣಾ ಸಮಾರಂಭ**

**'ನೇಸರು' ವಿಶೇಷ ಸಂಚಿಕೆ ಬಿಡುಗಡೆ.**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077